ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತುಸಾಕ್ಷರತಾ ಇಲಾಖೆ

ಪಾಠ ಆಧಾರಿತ ಮೌಲ್ಯಾಂಕನ ಸಾಮಗ್ರಿ

2025-26

ಕನ್ನಡ

ಪ್ರಥಮ ಭಾಷೆ

4

ನಾಲ್ಕನೆಯ ತರಗತಿ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,

ಬನಶಂಕರಿ 3ನೇ ಹಂತ,ಬೆಂಗಳೂರು – 560085.

ಮತ್ತು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾಸನ

ಪರಿಕಲ್ಪನೆ ಮತ್ತು ಮಾರ್ಗದರ್ಶನ

ಶ್ರೀಮತಿ ರಶ್ಮಿ ಮಹೇಶ್ ಭಾ.ಆ. ಸೇ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಡಾ.ತ್ರಿಲೋಕಚಂದ್ರ ಕೆ ವಿ, ಭಾ.ಆ. ಸೇ

ಆಯುಕ್ತರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು

ಶ್ರೀ ಗೋಪಾಲಕೃಷ್ಣ ಹೆಚ್ಎನ್

ನಿರ್ದೇಶಕರು

ಡಿ ಎಸ್ ಇ ,ಆರ್ ಟಿ ಬೆಂಗಳೂರು

ಡಯಟ್ ಸಹಕಾರ

ಪ್ರಾಂಶುಪಾಲರು

ಶ್ರೀ ರಂಗನಾಥಸ್ವಾಮಿ ಜಿ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಸನ

ಮೆಂಟರ್

ಶ್ರೀ ಕುಮಾರಸ್ವಾಮಿ ಎಚ್. ಎಂ

ಉಪನ್ಯಾಸಕರು ಡಯಟ್ ಹಾಸನ

ಸಂಯೋಜನೆ

ಶ್ರೀಮತಿ ರಾಧಾ ಪಿ

ಹಿರಿಯ ಸಹಾಯಕ ನಿರ್ದೇಶಕರು

ಡಿ ಎಸ್ ಇ ,ಆರ್ ಟಿ ಬೆಂಗಳೂರು

ಪಾಠಾಧಾರಿತ ಮೌಲ್ಯಾಂಕನ ಸಾಮಗ್ರಿ ರಚನಾ ಸಂಪನ್ಮೂಲ ತಂಡ

1 ರಮ್ಯ ಹೆಚ್. ಕೆ. ಸ.ಶಿ. ಸ. ಹಿ . ಪ್ರಾ ಶಾಲೆ ಸಾತೇನಹಳ್ಳಿ ಹಾಸನ //ತಾ//

2 ಸುಮ ಎಚ್ ಸಿ ಜಿ ಎಚ್ ಪಿ ಎಸ್ ಕಬ್ಬಿಗೆರೆ ಅರಕಲಗೂಡು //ತಾ//

3 ಆಶಾ ಜೆ ಎಂ ಜಿ ಎಚ್ ಪಿ ಎಸ್ ಸಕಲೇಶಪುರ //ತಾ//

4 ಭವ್ಯ, ಸ. ಹಿ . ಪ್ರಾ ಶಾಲೆ ಅಪ್ಪೇನಹಳ್ಳಿ ಅರಸೀಕೆರೆ //ತಾ//

5 ನಾಗಮಣಿ ಜಿ, ಸ. ಹಿ . ಪ್ರಾ ಶಾಲೆ ಬಾಳ್ಳುಪೇಟೆ ಸಕಲೇಶಪುರ //ತಾ//

6. ನಾಗಜ್ಯೋತಿ ಎನ್ ಎಂ, ಸ. ಕಿ. ಪ್ರಾ ಶಾಲೆ ಭಕ್ತರಹಳ್ಳಿ, ಚನ್ನರಾಯಪಟ್ಟಣ //ತಾ//

7. ಮಧುಮತಿ ಜಿ, ಸ. ಹಿ . ಪ್ರಾ ಶಾಲೆ ಕಟ್ಟಹಳ್ಳಿ ಹೊಳೆನರಸೀಪುರ //ತಾ//

8. ದ್ರಾಕ್ಷಾಯಿಣಿ ಎನ್. ಸ ಶಿ, ಸ. ಹಿ . ಪ್ರಾ ಶಾಲೆ ಯರೇಹಳ್ಳಿ, ಹಾಸನ// ತಾ//

9. ವೀಣಾ ಜಿ, ಸ. ಕಿ . ಪ್ರಾ ಶಾಲೆ ನೇರಲಕೆರೆಕೊಪ್ಪಲು , ಆಲೂರು //ತಾ//

10. ರೇಣುಕಾ, ಸ. ಕಿ . ಪ್ರಾ ಶಾಲೆ ಬಾಳ್ಳುಪೇಟೆ ಸಕಲೇಶಪುರ //ತಾ//

11. ರಮ್ಯಾ ಡಿ.ಜೆ, ಸ. ಕಿ . ಪ್ರಾ ಶಾಲೆ ಕಾಕನ ಮನೆ ಸಕಲೇಶಪುರ //ತಾ//

12. ಹರಿಣಿ ಟಿ ಎಂ, ಸ. ಹಿ . ಪ್ರಾ ಶಾಲೆ ಸಿಂಗಾಪುರ ಆಲೂರು //ತಾ//

13. ಶ್ವೇತಾ, ಸ. ಹಿ . ಪ್ರಾ ಶಾಲೆ ಕೆಳಗಳಲೆ ಸಕಲೇಶಪುರ //ತಾ//

14. ಜಯಲಕ್ಷ್ಮಿ, ಸ. ಕಿ . ಪ್ರಾ ಶಾಲೆ ಮಾರಗೊಂಡನಹಳ್ಳಿ ಅರಸೀಕೆರೆ //ತಾ//

15. ಸುಕನ್ಯಾ ಜಿ, ಸ. ಹಿ . ಪ್ರಾ ಶಾಲೆ ಸಿಂಗಟಗೆರೆ ಆಲೂರು //ತಾ//

16. ರಾಣಿ ಸಿ.ಟಿ. ಸ. ಶಿ, ಸ. ಕಿ . ಪ್ರಾ ಶಾಲೆ ಚಂಗಡಿಹಳ್ಳಿ, ಸಕಲೇಶಪುರ //ತಾ//

ಮಾರ್ಗದರ್ಶಕರು ಹಾಗೂ ಪರಿಶೀಲಕರು

ಕವಿತಾ ಎನ್. ಬಿ,ಆರ್. ಪಿ

ನೆಲಮಂಗಲ ತಾ/

ಬೆಂಗಳೂರು ಗ್ರಾಮಾಂತರ ಜಿಲ್ಲೆ

ರಶ್ಮಿ

ಸ. ಹಿ. ಪ್ರಾ. ಶಾಲೆ, ಕತ್ತರಿಗುಪ್ಪೆ, ಬೆಂಗಳೂರು ದಕ್ಷಿಣ

ಪರಿವಿಡಿ

ಘಟಕ 01: ಕನ್ನಡಮ್ಮನ ಹರಕೆ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	20	20	55%
2.	ಗ್ರಹಿಕೆ	14	22	39%
3.	ಅಭಿವ್ಯಕ್ತಿ	1	3	3%
4.	ಪ್ರಶಂಸೆ	1	2	3%
ಒಟ್ಟು		36	45	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	23	29	64%
2.	ಸುಲಭ	11	11	31%
3.	ಕಠಿಣ	2	5	5%
ಒಟ್ಟು		36	45	100%

ಘಟಕ 01: ಕನ್ನಡಮ್ಮನ ಹರಕೆ

ಕಲಿಕಾ ಫಲ 03:- ಕಥೆ, ಕವಿತೆ ಮತ್ತು ಬೇರೆ ವಸ್ತು ವಿಷಯಗಳನ್ನು ತನ್ನದೇ ರೀತಿಯಲ್ಲಿ ಮತ್ತು ಭಾಷೆಯಲ್ಲಿ ಹೇಳುತ್ತಾ, ಅವರಲ್ಲಿ ತನ್ನದೇ ಸ್ವ0ತ ಕಥೆ, ವಿಷಯಗಳನ್ನು ಜೋಡಿಸುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಆಯ್ಕೆಗಳಲ್ಲಿ ಸೂಕ್ತ ಆಯ್ಕೆಯನ್ನು ಆರಿಸಿ ಬರೆ.

1. ಕನ್ನಡಮ್ಮನ ಹರಕೆ ಪದ್ಯ ಬರೆದವರು___ (ಸುಲಭ)
   ಅ) ಕುವೆಂಪು ಆ) ದ.ರಾ.ಬೇಂದ್ರೆ ಇ) ಶಿವರಾಮಕಾರಂತ ಈ) ಪು.ತಿ.ನ

2. ಕುವೆಂಪು ಅವರ ಪೂರ್ಣ ಹೆಸರು ________ (ಸುಲಭ)
   ಅ) ಪುಟ್ಟಪ್ಪ ಆ) ವೆಂಕಟಪ್ಪ ಪುಟ್ಟಪ್ಪ
   ಇ) ಪಾಟೀಲ ಪುಟ್ಟಪ್ಪ ಈ) ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ.

3. ಕೆ.ವಿ.ಪುಟ್ಟಪ್ಪ ನವರ ಕಾವ್ಯನಾಮ ___ (ಸುಲಭ)
   ಅ) ಅಂಬಿಕಾತನಯದತ್ತ ಆ) ಕುವೆಂಪು
   ಇ)ತೀ.ನಂ.ಶ್ರೀ ಈ) ಪು.ತಿ.ನ

4.ಇವರಲ್ಲಿ ರಾಷ್ಟ್ರಕವಿಯನ್ನು ಆರಿಸಿ ಬರೆಯಿರಿ _____ (ಸುಲಭ)
   ಅ) ಜಿ.ಎಸ್. ಶಿವರುದ್ರಪ್ಪ ಆ) ಮಂಜೇಶ್ವರ ಗೋವಿಂದ ಪೈ
   ಇ) ಕುವೆಂಪು ಈ) ಎಲ್ಲರೂ

5. ಮರೆತೆಯಾದರೆ _____________- ಮರೆತಂತೆ ನನ್ನ. _____ (ಸುಲಭ)
   ಅ) ದಮ್ಮಯ್ಯ ಆ) ಅಯ್ಯೋ ಇ) ಕಂದಯ್ಯ ಈ) ನನ್ನ.

6. ಮೊಲೆಯ ಹಾಲೆಂತಂತೆ ______________ ಬಾಯ್ಗೆ. (ಸುಲಭ)
   ಅ)ಹೆಜ್ಜೇನು ಆ) ಕಿರುಜೇನು ಇ) ಸವಿಜೇನು ಈ)ಹಾಲ್ಜೇನು.

7. ಹೋರಾಡು ಕನ್ನಡಕ್ಕೆ________________ರನ್ನಾ. (ಸುಲಭ)
   ಅ} ವೀರನಾಗಿ ಆ)ಶೂರನಾಗಿ ಇ)ಕಲಿಯಾಗಿ ಈ)ಧೀರನಾಗಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸು.

8.'ಪರ' ಪದದ ವಿರುದ್ಧಾರ್ಥಕ ಪದ ಬರೆ. (ಸಾಧಾರಣ)

9.'ಕಂದ' ಪದದ ಸಮಾನಾರ್ಥಕ ಪದ ಬರೆ. (ಸಾಧಾರಣ)

10.'ಕಲಿ' ಪದದ ನಾನಾರ್ಥಕ ಪದಗಳನ್ನು ಬರೆ. (ಸಾಧಾರಣ)

11.'ನನ್ನ' ಪದದ ಅನ್ಯವಚನ ತಿಳಿಸು(ಸಾಧಾರಣ)

12.'ಇಹಪರ' ಪದವನ್ನು ಸ್ವಂತ ವಾಕ್ಯದಲ್ಲಿ ಬಳಸು. (ಸಾಧಾರಣ)

13. ; ಈ ಲೇಖನ ಚಿಹ್ನೆಯನ್ನು ಹೆಸರಿಸು. (ಸಾಧಾರಣ)

III. 14. ಹೊಂದಿಸಿ ಬರೆ. (ಸುಲಭ)

ಎ)ದುಡಿ	ಸೆಣಸು
ಬಿ)ಮಡಿ	ರುಚಿ
ಸಿ)ಕಲಿ	ಶ್ರಮಪಡು
ಡಿ)ಸವಿ.	ಮರಣ
ಇ)ಹೋರಾಡು	ವೀರ

IV. ಕೆಳಗಿನ ಒತ್ತಕ್ಷರಗಳನ್ನು ಬಳಸಿಕೊಂಡು ಒಂದೊಂದು ಪದ ಬರೆ. (ಸುಲಭ)

15. ಟ್ಟ-

16 . ಕ್ಷ –

17 ಶ್ರೇ –
18 ನ್ನ –

V. ಕೆಳಗಿನ ಪದಗಳನ್ನು ಕೂಡಿಸಿ ಬರೆ. (ಸಾಧಾರಣ)

19.ತಾಯಿಯ+ಅಪ್ಪುಗೆ=

20.ಮರೆತೆ +ಆದರೆ=

21.ಹರಕೆ+ ಇದು=

22.ಕನ್ನಡ+ಅಮ್ಮನ=

23.ಕಲಿ+ಆಗಿ=

VI. ಕೆಳಗಿನ ಪದಗಳ ಸರಿಯಾದ ರೂಪಕ್ಕೆ ವೃತ್ತ ಹಾಕಿ. (ಸುಲಭ)

24.ಹಪುಗೆ, ಅಪ್ಪುಗೆ, ಹಪ್ಪುಗೆ, ಆಪ್ಪುಗೆ.

25.ಹಾಲು, ಅಲು, ಆಲು, ಹಲು

26.ಅರಾಕೆ, ಆರಕೆ, ಹರಕೆ, ಹಾರಾಕೆ

27.ಹೋರಾಡು, ಓರಾಡು, ಒರಾಡು, ಹೊರಾಡು

VII.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು (ಸುಲಭ)

28.ಕನ್ನಡದ ಕಂದ ಯಾವುದನ್ನು ಮರೆಯಬಾರದು?

29..ಕನ್ನಡದ ಕಂದ ಯಾವುದನ್ನು ಕಾಪಾಡಬೇಕು?

30.ಯಾರ ಅಪ್ಪುಗೆ ಬಲು ಸೊಗಸಾಗಿರುತ್ತದೆ?

31.ಯಾರ ನುಡಿ ಬಾಳಿಗೆ ಶ್ರೇಯಸ್ಸು ಆಗಿರುತ್ತದೆ?

32.ಕನ್ನಡದ ಕಂದ ಯಾವುದಕ್ಕಾಗಿ ದುಡಿದು ಮಡಿಯಬೇಕು?

VIII. ಈ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸು.

33...ಗುರುವಿನೊಳ್ನುಡಿಯಂತೆ ಶ್ರೇಯಸ್ಸು ಬಾಳ್ಗೆ ತಾಯ್ನುಡಿ ದುಡಿದು ಮಡಿ ಇಹಪರಗಳೇಳ್ಗೆ, ಈ ಸಾಲುಗಳ ಭಾವಾರ್ಥವನ್ನು ಬರೆಯಿರಿ.(ಕಠಿಣ)

34.ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಬಳಸಿ ಕವಿತೆಯನ್ನು ಪೂರ್ಣಗೊಳಿಸಿ. (ಸುಲಭ)

(ಮಾವು, ಸೀಬೆಹಣ್ಣು, ಹಲಸಿನ ಹಣ್ಣು,ಸೇಬು ,ಚಾಕಲೇಟ್)

ಹಳದಿ ಬಣ್ಣದ_

ಮಕ್ಕಳ ಇಷ್ಟದ —

ಕೆಂಪು ಬಣ್ಣದ—

ಕರಡಿ ಇಷ್ಟದ —-

ಬಡವರ ಸೇಬು—-

IX.ಈ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸು.

35. ಕನ್ನಡಮ್ಮನ ಹರಕೆ ಪದ್ಯದ ತಿರುಳನ್ನು ನಿನ್ನ ವಾಕ್ಯದಲ್ಲಿ ಬರೆ. (ಕಠಿಣ)

X. .36. ಈ ಪದ್ಯಭಾಗವನ್ನು ಪೂರ್ಣಗೊಳಿಸಿರಿ (ಸುಲಭ)

ದಮ್ಮಯ್ಯ ಕಂದಯ್ಯ

—--------------

—------------

ಮರೆಯದಿರು,ಚಿನ್ನಾ I

ಘಟಕ 02: ಬುದ್ಧಿವಂತ ರಾಮಕೃಷ್ಣ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	6	6	30%
2.	ಗ್ರಹಿಕೆ	7	8	35%
3.	ಅಭಿವ್ಯಕ್ತಿ	6	17	30%
4.	ಪ್ರಶಂಸೆ	1	2	5%
ಒಟ್ಟು		20	33	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	12	12	60%
2.	ಸುಲಭ	3	4	15%
3.	ಕಠಿಣ	5	17	25%
ಒಟ್ಟು		20	33	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 02: ಬುದ್ಧಿವಂತ ರಾಮಕೃಷ್ಣ

ಕಲಿಕಾ ಫಲ 08 - ಪಠ್ಯೇತರ ವಿಷಯ ಸಾಮಗ್ರಿಗಳನ್ನು (ಉದಾಹರಣೆಗೆ : ಬಾಲ ಪತ್ರಿಕೆ / ಸಮಾಚಾರ ಪತ್ರಿಕೆಗಳ ಶೀರ್ಷಿಕೆ, ಮಕ್ಕಳ ಸಾಹಿತ್ಯ, ಇತ್ಯಾದಿ) ಓದಿ ತಿಳಿಯುತ್ತಾರೆ ಮತ್ತು ಅವುಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಾರೆ.

I. ಸರಿಯಾದ ಉತ್ತರವನ್ನು ಆರಿಸಿ ಬರೆ. (ಸುಲಭ)

1. ನಮ್ಮ ಶಾಲೆಯಲ್ಲಿ ಹುಡುಗರು ಇದ್ದಾನೆ. ಈ ವಾಕ್ಯದ ಸರಿಯಾದ ರೂಪವಿದು.

ಅ. ನಮ್ಮ ಶಾಲೆಯಲ್ಲಿ ಹುಡುಗಿಯರು ಇದ್ದಾರೆ.

ಆ. ನಮ್ಮ ಶಾಲೆಯಲ್ಲಿ ಹುಡುಗ ಇದ್ದಾನೆ.

ಇ. ನಮ್ಮ ಶಾಲೆಯಲ್ಲಿ ಹುಡುಗರು ಇದ್ದಾರೆ.

ಈ. ನಮ್ಮ ಶಾಲೆಯಲ್ಲಿ ಮಕ್ಕಳುಇದ್ದಾರೆ.

2. ರೈತನು ಹಸುಗಳ ಹಾಲನ್ನು ಮಾರಿ ---------- ಸಂಪಾದಿಸಿದನು.

ಅ. ಧನ ಆ. ದನ

ಇ. ದಾನ ಈ. ಧಾನ

3. ಪಾರಿವಾಳಗಳು ಬೇಟೆಗಾರನನ್ನು ಕಂಡು ಹೆದರಿ ----------- ಹೋದವು .

ಅ. ಆರಿ ಆ. ಜಾರಿ

ಇ. ಹಾರಿ ಈ. ಓಡಿ

4. 'ಆಟ' ಇದರ ಜೋಡು ನುಡಿ ____________

ಅ. ಕಾಟ ಆ. ಪಾಠ

ಇ. ನೋಟ ಈ. ಊಟ

5. ಈ ಕೆಳಗಿನವುಗಳಲ್ಲಿ ಮಕ್ಕಳ ಪತ್ರಿಕೆ________________

ಅ. ಬಾಲ ಮಂಗಳ ಆ. ವಿಜಯ ಕರ್ನಾಟಕ

ಇ. ಪ್ರಜಾವಾಣಿ ಈ. ಸಂಯುಕ್ತ ಕರ್ನಾಟಕ

6. ಬಟ್ಟೆ + ಗಳು ಕೂಡಿಸಿ ಬರೆದಾಗ ------------

ಅ. ಬಟ್ಟೆಗಳು ಆ. ಬುಟ್ಟಿಗಳು

ಇ. ಬಟ್ಟಿ ಗಳು ಈ ಬೆಟ್ಟಗಳು

II. ಒಂದು ವಾಕ್ಯಗಳಲ್ಲಿ ಉತ್ತರಿಸಿ. (ಸುಲಭ)

7. ವಿದ್ಯಾಸಾಗರನು ಯಾರ ಆಸ್ಥಾನಕ್ಕೆ ಬಂದನು?

8. ವಿದ್ಯಾ ಸಾಗರನು ಯಾವ ವಿಷಯದಲ್ಲಿ ಮಹಾ ಮೇಧಾವಿಯಾಗಿದ್ದನು?

9. ತೆನಾಲಿ ರಾಮಕೃಷ್ಣನನ್ನು ಯಾರು ಸನ್ಮಾನಿಸಿದರು?

10. ತೆನಾಲಿ ರಾಮಕೃಷ್ಣ ಸಭೆಗೆ ಏನನ್ನು ತೆಗೆದುಕೊಂಡು ಬಂದಿದ್ದನು?

11. ತಿಲಕಾಷ್ಠ ಪದದ ಅರ್ಥ ಬರೆಯಿರಿ

12. ಗಾದೆಯನ್ನು ಪೂರ್ಣಗೊಳಿಸಿ

ವಿದ್ಯೆ ವಿನಯವನ್ನು ಕಲಿಸುತ್ತದೆ ಬುದ್ಧಿ —---------

III.ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸು

13. ತೆನಾಲಿ ರಾಮಕೃಷ್ಣನನ್ನು ಏಕೆ ಸನ್ಮಾನಿಸಲಾಯಿತು?(ಸಾಧಾರಣ)

14. ತೆನಾಲಿ ರಾಮಕೃಷ್ಣನ ಬುದ್ಧಿವಂತಿಕೆಯನ್ನು ನೀವು ಮೆಚ್ಚುವಿರಾ? ಏಕೆ?(ಕಠಿಣ)

IV. ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆ (ಸಾಧಾರಣ)

15. ಪಲಾಯನ

16. ಅಪ್ಪಣೆ

V.17. ನಿನ್ನ ಶಾಲೆಯಲ್ಲಿ ನಡೆಸಲಿರುವ ವಾರ್ಷಿಕೋತ್ಸವ ಕಾರ್ಯಕ್ರಮದ ಪ್ರಚಾರಕ್ಕಾಗಿ ಒಂದು ಭಿತಿ ಪತ್ರ ತಯಾರಿಸು (ಕಠಿಣ)

VI .ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ .

18. ಈ ಕೆಳಗಿನ ಕಥೆಯನ್ನು ಪೂರ್ಣಗೊಳಿಸು. (ಕಠಿಣ)

ಒಂದು ಕಾಡಿನಲ್ಲಿ ವಯಸ್ಸಾದ ಸಿಂಹ ಒಂದು ಆಹಾರ ಹುಡುಕಿಕೊಂಡು ಹೋಗುತ್ತಿತ್ತು. ದಾರಿಯಲ್ಲಿ ಮೊಲ ಒಂದನ್ನು ನೋಡಿತು ಮೊಲವನ್ನು ತಿಂದರೆ ಸ್ವಲ್ಪವಾದರೂ ಹೊಟ್ಟೆ ತುಂಬುತ್ತದೆ ಎಂದು ಯೋಚಿಸಿತು —----------------------------

19. ಕೆಳಗೆ ನೀಡಿರುವ ಪಠ್ಯಾಂಶವನ್ನು ಅರ್ಥೈಸಿಕೊಂಡು ಅದರಲ್ಲಿನ ಪಾತ್ರಗಳನ್ನ ಸಂಭಾಷಣೆ ರೂಪದಲ್ಲಿ ವ್ಯಕ್ತಪಡಿಸು. (ಕಠಿಣ)

ಒಂದು ಊರಿನಲ್ಲಿ ಒಬ್ಬ ವಿದ್ವಾಂಸನಿದ್ದನು ಅವನು ಸಾಕಷ್ಟು ಓದಿಕೊಂಡಿರುವನೆಂದು ಬಹಳ ಗರ್ವದಿಂದ ನಡೆದುಕೊಳ್ಳುತ್ತಿದ್ದನು. ತಾನೊಬ್ಬ ಮಹಾ ಪಂಡಿತನೆಂದು ಗತ್ತಿನಿಂದ ಮೆರೆಯುತ್ತಿದ್ದನು.

ಒಮ್ಮೆ ದಾರಿಯಲ್ಲಿ ಅವನಿಗೆ ರೈತನೊಬ್ಬನು ಸಿಕ್ಕಿದನು ವಿದ್ವಾಂಸನು ರೈತನಿಗೆ ನೀನು ವೇದಗಳನ್ನು ಓದಿರುವೆಯಾ? ಎಂದು ಕೇಳಿದಾಗ, ಇಲ್ಲ ಸ್ವಾಮಿ ನಾನು ಓದಿಲ್ಲ ಎಂದನು. ವಿದ್ವಾಂಸನು ಮುಂದುವರೆದು ಮಹಾಕಾವ್ಯ ವ್ಯಾಕರಣ ಮುಂತಾದವುಗಳನ್ನು

ಓದಿರುವೆಯಾ? ಎಂದು ಅಹಂಕಾರದಿಂದ ಹೇಳಿದಾಗ ರೈತ ಇಲ್ಲ ಮಹಾಸ್ವಾಮೀ ನನಗೆ ಓದಲು ಅವಕಾಶ ಸಿಗಲಿಲ್ಲವೆಂದು ಕುಗ್ಗಿ ಹೇಳುತ್ತಾನೆ. ಅದಕ್ಕೆ ವಿದ್ವಾಂಸನ ನಿನ್ನ ಇಡೀ ಜೀವನ ಹೊಲ ಉಳುಮೆ ಮಾಡುವುದರಲ್ಲೇ ಹೋಯಿತು. ಇದರಿಂದಾಗಿ ನಿನಗೆ ತಿಳುವಳಿಕೆ ಇಲ್ಲ, ನಿನಗೆ ಅಜ್ಞಾನವಿದೆ ನಿನ್ನ ಜೀವನ ವ್ಯರ್ಥವಾಗಿ ಹೋಯಿತು. ಆದರೆ ನನಗೆ ಜನರು ತುಂಬಾ ಗೌರವ ಕೊಡುತ್ತಾರೆ ಎಂದು ರೈತನನ್ನು ನಿಂದನೆ ಮಾಡುತ್ತಾನೆ. ಈ ಮಾತಿಗೆ ರೈತ ನಿಜ ಸ್ವಾಮಿ ನಿಮ್ಮಿಂದ ಜನ ತಿಳುವಳಿಕೆ ಪಡೆದು ಜ್ಞಾನ ಹೆಚ್ಚಿಸಿಕೊಳ್ಳಬಹುದು, ಆದರೆ ನೀವು ಹಸಿವಾದಾಗ ಊಟವನ್ನೇ ಮಾಡಬೇಕು, ನೀವೆಷ್ಟೇ ದೊಡ್ಡವರಾದರೂ ನನ್ನಂಥ ರೈತ ಬೆಳೆದ ಆಹಾರವನ್ನೇ ತಿನ್ನಬೇಕು. ರೈತನಿಲ್ಲದೆ ಈ ಜಗತ್ತು ನಡೆದಿಲ್ಲವೆಂದು ಹೆಮ್ಮೆಯಿಂದ ಹೇಳಿದನು.

20. ಕೆಳಗಿನ ಕಥೆಯ ಸಾರಾಂಶವನ್ನು ಓದಿಕೊಂಡು 5 ಸರಳ ಪ್ರಶ್ನೆಗಳನ್ನು ರಚಿಸು. (ಕಠಿಣ)

ಒಂದು ಪುಟ್ಟ ಹಳ್ಳಿ, ಆ ಹಳ್ಳಿಯಲ್ಲಿ ಶಾಂತವ್ವಳೆಂಬ ಅಜ್ಜಿ ವಾಸವಾಗಿದ್ದಳು. ಇವಳಿಗೆ ಮೂವರು ಗಂಡು ಮಕ್ಕಳಿದ್ದರು. ಅವರು ತಮ್ಮ ಹೆಂಡತಿ ಮಕ್ಕಳೊಂದಿಗೆ ಸುಖ ಜೀವನ ನಡೆಸುತ್ತಿದ್ದರು ಅಜ್ಜಿ ಒಬ್ಬಂಟಿಯಾಗಿ ಒಂದು ಪುಟ್ಟ ಗುಡಿಸಿಲಿನಲ್ಲಿ ವಾಸಿಸುತ್ತಿದ್ದಳು. ಅಜ್ಜಿಯು ಒಂದು ಸುಂದರವಾದ ದಷ್ಟಪುಷ್ಟವಾದ ಕೆಂದನೆಯ ಬಣ್ಣದ ಆಕಳನ್ನು ಸಾಕಿದ್ದಳು ಅದನ್ನು ಪ್ರೀತಿಯಿಂದ ಗೌರಿ ಎಂದು ಕರೆಯುತ್ತಿದ್ದಳು.ಸುತ್ತಮುತ್ತಲಿನ ಹೊಲಗದ್ದೆಯ ಬಯಲಿನಲ್ಲಿ ಹಸುವನ್ನು ಮೇಯಿಸುತ್ತಿದ್ದಳು. ಆ ಹಸು ಪ್ರತಿನಿತ್ಯ ಎಂಟು ಲೀಟರ್ ಹಾಲನ್ನು ಕೊಡುತ್ತಿತ್ತು ಅಜ್ಜಿಯು ಆ ಹಾಲನ್ನು ಮಾರಿ ಬಂದ ಹಣದಿಂದ ತನ್ನ ಜೀವನ ನಿರ್ವಹಣೆ ಮಾಡುತ್ತಿದ್ದಳು.

ಘಟಕ 03: ವೀರಮಾತೆ ಜೀಜಾಬಾಯಿ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	9	12	38%
2.	ಗ್ರಹಿಕೆ	9	12	38%
3.	ಅಭಿವ್ಯಕ್ತಿ	4	2	16%
4.	ಪ್ರಶಂಸೆ	2	6	8%
ಒಟ್ಟು		24	38	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	7	7	29%
2.	ಸುಲಭ	13	21	54%
3.	ಕಠಿಣ	4	10	17%
ಒಟ್ಟು		24	38	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 03: ವೀರಮಾತೆ ಜೀಜಾಬಾಯಿ

ಕಲಿಕಾ ಫಲ 14 -ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗೆ (ಸೂಚನಾ ಫಲಕದಲ್ಲಿ ಹಾಕಿರುವ ಸೂಚನೆಗಳು, ವಸ್ತುಗಳ ಪಟ್ಟಿ, ಕಲೆ, ಕವಿತೆ, ಪತ್ರ, ಪ್ರಬಂಧ ಮುಂತಾದವು) ಅನುಸಾರವಾಗಿ ಬರೆಯುತ್ತಾರೆ.

I . ಬಿಟ್ಟಿರುವ ಸ್ಥಳಗಳಲ್ಲಿ ಸರಿಯಾದ ಉತ್ತರವನ್ನು ಬರೆ. (ಸುಲಭ)

1 ಛತ್ರಪತಿ ಶಿವಾಜಿ...... ಸಾಮ್ರಾಜ್ಯದ ಉನ್ನತಿಗೆ ಕಾರಣನಾದ

2 ಶಿವಾಜಿಯು ಪ್ರಬಲ ಮೊಘಲ್ ಸಾಮ್ರಾಟ್........ನ ವಿರುದ್ಧ ಹೋರಾಡಿ ಜಯಗಳಿಸಿದನು.

II. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ. (ಸಾಧಾರಣ)

3 ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ಮಾಡಿರಿ: ಚಿಗುರು ಮೀಸೆಯ ನುಡಿದನು ವೀರ ಬಾಲಕ ನಮ್ರತೆಯಿಂದ.

4. ಅರ್ಥ ತಿಳಿಸಿ, ವಿಜಯೋತ್ಸವ

5. ಬಿಡಿಸಿ ಬರೆಯಿರಿ : ವಿದ್ಯಾಭ್ಯಾಸ.

6. ವಾಕ್ಯ ರಚಿಸಿ: ವೈಭವ

III ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು

7 ಜೀಜಾಬಾಯಿ ತನ್ನ ಕನಸಿನೊಂದಿಗೆ ಯಾವ ಸ್ಥಳಕ್ಕೆ ಬಂದು ನೆಲೆಸಿದಳು? (ಸುಲಭ)

8. ಜೀಜಾಬಾಯಿ ಎಂತಹ ಹೆಣ್ಣು ಮಗಳಾಗಿದ್ದಳು?(ಸುಲಭ)

9. ತಾಯಿ ಮಗನ ಸಂಭಾಷಣೆಯಲ್ಲಿ ಬರುವ ವ್ಯಕ್ತಿಗಳನ್ನು ಹೆಸರಿಸು. (ಸುಲಭ)

10. ಮೊಘಲರ ಸಾಮ್ರಾಟ ಔರಂಗಜೇಬ್ ನ ವಿರುದ್ಧ ಹೋರಾಡಿ ಜಯಗಳಿಸಿದವರು ಯಾರು? (ಸುಲಭ)

11. ಶಿವಾಜಿಯನ್ನು ದಾದಾಜಿಕೊಂಡದೇವನಲ್ಲಿ ಕಳುಹಿಸಲು ಕಾರಣವೇನು? (ಸಾಧಾರಣ)

12. ಶಿವಾಜಿಗೆ ಪ್ರತಿನಿತ್ಯ ಅವನ ತಾಯಿ ಯಾವ ಯಾವ ಕಥೆಗಳನ್ನು ಹೇಳುತ್ತಿದ್ದಳು ? (ಸುಲಭ)

IV ಯಾರು ಯಾರಿಗೆ ಹೇಳಿದರು ಎಂದು ಸಂದರ್ಭ ಸಹಿತ ವಿವರಿಸಿ. (ಸಾಧಾರಣ)

13. "ಆಗಲಿ ಮಾತಾಜಿ ಭವಾನಿ ತಾಯಿಯ ಮೇಲೆ ಆಣೆ ನೀನು ಕೇಳಿದನ್ನು ಕೊಡುವೆ."

ಯಾರು:

ಯಾರಿಗೆ:

14. “ಬಾ ಕಂದ ಇಲ್ಲಿ ಕುಳಿತುಕೋ”

ಯಾರು:

ಯಾರಿಗೆ :

V ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ.

15 ವೀರ ಬಾಲಕ ಭವಾನಿ ತಾಯಿಯ ಮೇಲೆ ಆಣೆ ಇಟ್ಟ ಉದ್ದೇಶ ಕುರಿತು ಬರೆಯಿರಿ (ಕಠಿಣ)

16 ತಾಯಿ ಮಗನಿಂದ ಬಹುಮಾನವನ್ನು ಕೇಳಿದ ಹಿಂದಿನ ಉದ್ದೇಶ ಏನಾಗಿತ್ತು?(ಕಠಿಣ)

17 ನಿನಗೆ ಗೊತ್ತಿರುವ ವೀರಮಹಿಳೆಯರ ಹೆಸರುಗಳನ್ನು ಪಟ್ಟಿಮಾಡು. (ಸಾಧಾರಣ)

18 ಜೀಜಾಬಾಯಿ ಸಂತೋಷಪಡಲು ಕಾರಣವೇನು? (ಸಾಧಾರಣ)

19 ಜೀಜಾಬಾಯಿ ಚಿಕ್ಕಂದಿನಿಂದ ಮಗನಲ್ಲಿ ಬೆಳೆಸಿದ ಗುಣಗಳು ಯಾವುವು? (ಸಾಧಾರಣ)

20 ದಾದಾಜಿಕೊಂಡದೇವನು ಗುರುವಾಗಿ ಶಿವಾಜಿಗೆ ಯಾವೆಲ್ಲ ಯುದ್ಧ ಕಲೆಗಳನ್ನು ಕಲಿಸಿದನು? (ಸಾಧಾರಣ)

21. ಶಿವಾಜಿಗೆ ಜೀಜಾಬಾಯಿ ಬಾಲ್ಯದಲ್ಲಿ ಬೆಳಿಸಿದಂತಹ ಆದರ್ಶ ಗುಣಗಳು ಯಾವುವು? (ಸಾಧಾರಣ)

22. ಶಿವಾಜಿ ತನ್ನ ತಾಯಿಯಿಂದ ಕಲಿತ ಮೌಲ್ಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡನೆ?ಹೌದಾದರೆ, ಹೇಗೆ ಎಂದು ನಿನ್ನ ಮಾತುಗಳಲ್ಲಿ ವಿವರಿಸು.(ಕಠಿಣ)

23. ಜೀಜಾಬಾಯಿ ಸ್ವತಂತ್ರವಾಗಿ ಬದುಕಲು ಪ್ರಾರಂಭಿಸಲು ಕಾರಣವೇನು? (ಸಾಧಾರಣ)

VI ಕೆಳಗಿನ ಪ್ರಶ್ನೆಗೆ ಮೂರು ನಾಲ್ಕು ವಾಕ್ಯದಲ್ಲಿ ಉತ್ತರಿಸಿ.

24 ಶಿವಾಜಿಯು ತಾಯಿಯಿಂದ ಕಲಿತ ಮೌಲ್ಯಗಳಲ್ಲಿ ನಿನಗೆ ಇಷ್ಟವಾದ ಮೌಲ್ಯ ಯಾವುದು? ಅದನ್ನು ನಿನ್ನ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳುವೆ ? (ಕಠಿಣ)

ಪದ್ಯ 04: ಮಳೆ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	13	17	45%
2.	ಗ್ರಹಿಕೆ	15	22	52%
3.	ಅಭಿವ್ಯಕ್ತಿ	1	4	3%
4.	ಪ್ರಶಂಸೆ	-	-	-
ಒಟ್ಟು		29	43	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	21	25	72%
2.	ಸುಲಭ	6	10	21%
3.	ಕಠಿಣ	2	8	7%
ಒಟ್ಟು		29	43	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಪದ್ಯ 04: ಮಳೆ

ಕಲಿಕಾ ಫಲ 10 : ಓದಿರುವ ಸಾಹಿತ್ಯಗಳ ವಿಷಯವಸ್ತು, ಘಟನೆಗಳು, ಚಿತ್ರಗಳು ,ಪಾತ್ರಗಳು , ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ. ಪ್ರಶ್ನಿಸುತ್ತಾರೆ ತಮ್ಮ ಅಭಿಪ್ರಾಯ ನೀಡುತ್ತಾರೆ, ತಮ್ಮ ಅಭಿಪ್ರಾಯಗಳಿಗೆ ತಾರ್ಕಿಕ ಸಮರ್ಥನೆ ನೀಡುತ್ತಾರ

I. ಸೂಕ್ತವಾದ ಉತ್ತರವನ್ನು ಆರಿಸಿ, ಬಿಟ್ಟ ಸ್ಥಳದಲ್ಲಿ ಬರೆ. (ಸುಲಭ)

1. "ಜೋರಾಗಿ ಗಾಳಿ ಬೀಸಿ ಕಸ ಉದುರಿತು" ಈ ವಾಕ್ಯದಲ್ಲಿ "ಕಸ" ಎಂಬ ಪದದ ಜೋಡುನುಡಿ____________

ಅ. ಎಲೆ ಆ. ಗಿಡ

ಇ. ಕಡ್ಡಿ ಈ. ಕಾರ್ಖಾನೆ

2. ಆವಿ ತಣಿದು ಭಾರವಾಗಿ ________ ಈ ಪದ್ಯದ ಮುಂದಿನ ಸಾಲು:

ಅ. ಮೇಲಕೇರಿತು ಆ. ಬೀಸಿ ಬಂದಿತು

ಇ. ಕುಸಿಯತೊಡಗಿತು. ಈ. ತುಂಬಿ ಹರಿಯಿತು.

3. "ಮಳೆ" ಪದ್ಯ ಬರೆದವರು:___________

ಅ. ಜನಪದ ಆ. ಸರ್ವಜ್ಞನ ತ್ರಿಪದಿಗಳು

ಇ. ಪಳಕಳ ಸೀತಾರಾಮ ಭಟ್ಟ ಈ. ಕುವೆಂಪು

4. ಘಳಿಗೆಯೊಳಗೆ ಬಾನು ತುಂಬ___________ಕವಿಯಿತು.

ಅ. ಮೋಡ ಆ. ಗುಡುಗು

ಇ. ಮಂಕು ಈ ಮಿಂಚು.

II. ಈ ಕೆಳಗಿನ ಪದಗಳನ್ನು ಕೂಡಿಸಿ ಬರೆ (ಸುಲಭ)

5. ಆವಿ + ಆಯಿತು = ___________

6. ಮೇಲಕೆ + ಏರಿತು = ___________

7. ಅಡ್ಡ + ಆಯಿತು = ___________

8. ಘಳಿಗೆ + ಒಳಗೆ = ___________

9. ಮೋಡ + ಎಲ್ಲ = ___________

III 10. ಹೊಂದಿಸಿ ಬರೆ (ಸುಲಭ)

ಎ. ಕಡಲ ನೀರು	ಗುಡುಗು ಗುಡುಗಿತು
ಬಿ. ಗುಡ್ಡ ಬೆಟ್ಟ	ಕೆಳಗೆ ಸುರಿಯಿತು
ಸಿ. ಬಾನು ತುಂಬ	ಅಡ್ಡವಾಯಿತು
ಡಿ. ಜಗವು ಬೆಳಗಿ	ಆವಿಯಾಯಿತು
ಇ. ಮಳೆಯ ನೀರು	ಮೋಡ ಕವಿಯಿತು

IV.ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆ (ಸುಲಭ)

11. ಕಡಲು, ಸಮುದ್ರ, ಸಾಗರ, ಮೋಡ

12. ನೆಲ, ಭೂಮಿ, ಗಗನ, ಧರೆ

13. ನೀರು, ಜಲ, ಆಕಾಶ, ಸಲಿಲ

14.ಜಗ, ಪ್ರಪಂಚ , ಲೋಕ, ಸಮುದ್ರ

15.ಬಾನು, ಆಕಾಶ, ಭಾನು, ಗಗನ

V ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆ. (ಸಾಧಾರಣ)

16. ನೀರು: ________ ________

17. ಬಾನು:________ ________

18. ನೆಲ:________ ________

19. ಕಡಲು:________ ________

VI. ಒಂದು ವಾಕ್ಯದಲ್ಲಿ ಉತ್ತರಿಸು (ಸುಲಭ)

20. ನೆಲದ ಮೇಲೆ ಯಾವುದು ಅಡ್ಡವಾಯಿತು?

21. ಆವಿ ಏನಾಗಿ ಕುಸಿಯತೊಡಗಿತು?

22. ಎಂತಹ ನೀರು ಕೆಳಗೆ ಸುರಿಯಿತು?

23. ಮೋಡ ಮೇಲೇರಿದಾಗ ಏನಾಯಿತು?

24. ಮಿಂಚು ಮಿಂಚಿದಾಗ ಯಾವುದು ಬೆಳಗಿತು?

25. ಕಡಲ ನೀರು ಆವಿಯಾಗಿ ಯಾವ ಕಡೆಗೆ ಬೀಸಿ ಬಂದಿತು?

VII . ಪದ್ಯದ ಮುಂದಿನ ಸಾಲುಗಳನ್ನು ಪೂರ್ಣಗೊಳಿಸು.

26.ಬಿಸಿಲ ಝಳಕೆ ಕಡಲ ನೀರು

—---------------------------

—---------------------- ಕಡೆಗೆ

—-------------------ಬಂದಿತು

VIII. ಕೆಳಗಿನ ಪ್ರಶ್ನೆಗಳಿಗೆ ಯೋಚಿಸಿ ಉತ್ತರ ಬರೆಯಿರಿ

27. ಮಳೆಗಾಲದಲ್ಲಿನೀನು ಉಪಯೋಗಿಸುವ ವಸ್ತುಗಳ ಹೆಸರು ಬರೆ (ಸಾಧಾರಣ).

28. ಮಳೆ ಹೆಚ್ಚಾದಾಗ ಉಂಟಾಗುವ ?ಸಮಸ್ಯೆಗಳು ಯಾವು ? (ಕಠಿಣ)

29. ಮಳೆಯಿಂದ ಆಗುವ ಅನುಕೂಲಗಳ ಬಗ್ಗೆಬರೆ. (ಕಠಿಣ)

ಘಟಕ 05: ಅಜ್ಜಿಯ ತೋಟದಲ್ಲಿ ಒಂದು ದಿನ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	10	14	43%
2.	ಗ್ರಹಿಕೆ	11	19	48%
3.	ಅಭಿವ್ಯಕ್ತಿ	2	8	9%
4.	ಪ್ರಶಂಸೆ	-	-	-
ಒಟ್ಟು		23	41	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	9	10	39%
2.	ಸುಲಭ	10	21	43%
3.	ಕಠಿಣ	4	10	18%
ಒಟ್ಟು		23	41	100%

ಘಟಕ 05: ಅಜ್ಜಿಯ ತೋಟದಲ್ಲಿ ಒಂದು ದಿನ

ಕಲಿಕಾ ಫಲ 02 : ಆಲಿಸಿದ ಸಾಹಿತ್ಯ ರಚನೆಗಳ ವಿಷಯ ವಸ್ತು, ಘಟನೆ, ಚಿತ್ರ, ಪಾತ್ರ, ಶಿರೋನಾಮೆ, ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ. ಪ್ರಶ್ನೆ ಕೇಳುತ್ತಾರೆ. ತನ್ನ ಅನಿಸಿಕೆಯನ್ನು ವ್ಯಕ್ತ ಮಾಡುತ್ತಾರೆ ಮತ್ತು ತನ್ನ ಮಾತಿಗೆ ತಾರ್ಕಿಕ ಕಾರಣ ನೀಡುತ್ತಾರೆ.

I. ವಿರುದ್ಧಾರ್ಥಕ ಪದ ಬರೆ (ಸುಲಭ)

1. ಹೊರಗೆ x

2. ಹಿಂದೆ x

3.ಹತ್ತಿರ x

4.ಭಯ x

5.ಆರಂಭ x

II. ಒಂದು ವಾಕ್ಯದಲ್ಲಿ ಉತ್ತರ ಬರೆ

6.ಮಲೆನಾಡ ತಪ್ಪಲಿನಲ್ಲಿರುವ ಊರು ಯಾವುದು? (ಸುಲಭ)

7.ಯಾವ ಪ್ರಾಣಿ ಸರಸರನೆ ಹರಿದು ಹೋಯಿತು? (ಸುಲಭ)

8.ಯಾವ ಪ್ರದೇಶಗಳಲ್ಲಿಹೇರಳವಾಗಿ ಮಳೆ ಬೀಳುತ್ತದೆ? (ಸುಲಭ)

9.ಅಜ್ಜಿಮಕ್ಕಳಿಗೆ ಎಂತಹ ಗಿಡಗಳನ್ನುನೆಡಲು ಹೇಳಿದಳು? (ಸಾಧಾರಣ)

10.ಅಜ್ಜಿಯ ತೋಟದಲ್ಲಿ ಬೆಳೆ ಬೆಳೆಯಲು ಯಾವ ಗೊಬ್ಬರವನ್ನುಬಳಸುತ್ತಿದ್ದರು? (ಸಾಧಾರಣ)

11. ಅಂತರ್ಜಲವನ್ನುಹೇಗೆ ಹೆಚ್ಚಿಸಲಾಗುತ್ತದೆ? (ಸಾಧಾರಣ)

III. ಈ ಮಾತುಗಳನ್ನು ಯಾರು? ಯಾರಿಗೆ ಹೇಳಿದರು. (ಸಾಧಾರಣ)

12."ನಿಧಾನವಾಗಿ ಬನ್ನಿ ಮುಳ್ಳುಗಳು ಇರಬಹುದು".

ಯಾರು:

ಯಾರಿಗೆ:

13."ಬೇಡಪ್ಪ ನಮ್ಮ ಕೈಕೊಳೆಯಾಗುತ್ತದೆ ನನ್ನ ಅಮ್ಮ ಬೈಯುತ್ತಾಳೆ".

ಯಾರು:

ಯಾರಿಗೆ:,

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:

14.ಸಾಮಾನ್ಯವಾಗಿ ತೋಟದ ಸುತ್ತಮುತ್ತ ಕಂಡುಬರುವ ಪ್ರಾಣಿಗಳು ಯಾವುವು? (ಸುಲಭ)

15.ಬಳ್ಳಾರಿ ಜಿಲ್ಲೆಯಲ್ಲಿಬೆಳೆಯುವ ಬೆಳೆಗಳು ಯಾವುವು? (ಸಾಧಾರಣ)

16.ಹಿಂದಿನ ಕಾಲದಲ್ಲಿಹೊಲ ಉಳಲು ಬಳಸುತ್ತಿದ್ದ ಸಾಧನಗಳು ಯಾವುವು? (ಸಾಧಾರಣ)

17.ಉಳುಮೆಯ ಬಗ್ಗೆ ಗುರುಗಳು ನೀಡಿದ ವಿವರಣೆ ಏನು? (ಸಾಧಾರಣ)

18.ವಿಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ಬೆಳೆಗಳನ್ನು ಬೆಳೆಯಲು ಕಾರಣವೇನು ? (ಕಠಿಣ)

V. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

19.ಹಿರಿಯರ ಸಹಕಾರದಿಂದ ಗಾದೆಗಳನ್ನು ಸಂಗ್ರಹಿಸಿ ಬರೆಯಿರಿ. (ಸಾಧಾರಣ)

20.ರೈತ ದೇಶದ ಬೆನ್ನೆಲುಬು ಇದರ ಬಗ್ಗೆನಾಲ್ಕು-ಐದು ವಾಕ್ಯಗಳಲ್ಲಿಬರೆಯಿರಿ. (ಕಠಿಣ)

21.ಹಳ್ಳಿಯ ಜನರ ದಿನನಿತ್ಯದ ಜೀವನ ಶೈಲಿ ಕುರಿತಂತೆ ಸ್ನೇಹಿತರೊಂದಿಗೆ ಚರ್ಚಿಸಿ ನಾಲ್ಕು-ಐದು ವಾಕ್ಯಗಳಲ್ಲಿ ಬರೆ. (ಕಠಿಣ)

22.ನಿಮ್ಮ ಕಲ್ಪನೆಯಂತೆ ಸುಂದರವಾದ ತೋಟದ ಚಿತ್ರವನ್ನು ಬರೆದು ಬಣ್ಣ ಹಚ್ಚಿರಿ.(ಕಠಿಣ)

23. ಬೆಳೆ ಬೆಳೆಯುವ ಹಂತಗಳನ್ನು ಕ್ರಮವಾಗಿ ಜೋಡಿಸಿ ಬರೆಯಿರಿ. (ಸಾಧಾರಣ)

1. ಬೆಳೆ ಕಟಾವು ಮಾಡುವುದು.

2. ಗೊಬ್ಬರ ಹಾಕುವುದು.

3. ಭೂಮಿಯನ್ನು ಹಸನು ಮಾಡುವುದು.

4. ನೀರು ಹಾಯಿಸುವುದು.

5. ಬಿತ್ತನೆ ಮಾಡುವುದು

ಘಟಕ 06: ದೊಡ್ಡವರು ಯಾರು?

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	6	6	22%
2.	ಗ್ರಹಿಕೆ	20	26	74%
3.	ಅಭಿವ್ಯಕ್ತಿ	1	4	4%
4.	ಪ್ರಶಂಸೆ	-	-	-
ಒಟ್ಟು		27	36	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	18	18	47%
2.	ಸುಲಭ	7	12	26%
3.	ಕಠಿಣ	2	6	7%
ಒಟ್ಟು		27	36	100%

ಘಟಕ 06: ದೊಡ್ಡವರು ಯಾರು?

ಕಲಿಕಾ ಫಲ 08: ಪಠ್ಯೇತರ ವಿಷಯ ಸಾಮಗ್ರಿಗಳನ್ನು (ಉದಾಹರಣೆಗೆ: ಬಾಲ ಪತ್ರಿಕೆ / ಸಮಚಾರ ಪತ್ರಿಕೆಗಳ ಶೀರ್ಷಿಕೆ, ಮಕ್ಕಳ ಸಾಹಿತ್ಯ, ಇತ್ಯಾದಿ) ಓದಿ ತಿಳಿಯುತ್ತಾರೆ ಮತ್ತು ಅವುಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಾರೆ.

I. 1. ಹೊಂದಿಸಿ ಬರೆಯಿರಿ (ಸುಲಭ)

ಎ. ಬೆಟ್ಟ. - ವಿವಾಹ

ಬಿ.ಜಗತ್ತು. - ಸಡಗರ

ಸಿ.ಮದುವೆ. - ಪರ್ವತ

ಡಿ. ಸಂಭ್ರಮ. - ವಿಶ್ವ

II. ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಆಯ್ಕೆಗಳಲ್ಲಿ ಸರಿ ಆಯ್ಕೆಯನ್ನು ಆರಿಸಿ ಬರೆಯ (ಸುಲಭ)

2. ಇಲಿಯ ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆ—----

ಅ) 5 ಆ) 3 ಇ) 1 ಈ) 4

3. ಹಗಲಿನಲ್ಲಿ ಬೆಳಕನ್ನು ನೀಡುವವರು—---

ಅ) ಮೌರ್ಯ. ಆ) ಕ್ಯಾಂಡಲ್. ಇ) ಸೂರ್ಯ. ಈ) ಆರ್ಯ

4.ತುಂತುರು ಎಂಬುದು ಮಕ್ಕಳಿಗಾಗಿ ಇರುವ ಪಾಕ್ಷಿಕ ಪತ್ರಿಕೆ ಆಗಿದೆ ಈ ಪತ್ರಿಕೆ—---- ದಿನಗಳಿಗೊಮ್ಮೆ ಪ್ರಕಟವಾಗುತ್ತದೆ

ಅ)15. ಆ)3. ಇ)1. ಈ)7

5. ಆನೆ ಬಹಳ—--ಪ್ರಾಣಿ

ಅ) ಬಲಿಷ್ಠವಾದ. ಆ) ಮೋಸಗಾರ. ಇ) ಸುಂದರವಾದ. ಈ) ಚತುರನಾದ

6. ಮಕ್ಕಳಿಗಾಗಿ ಇರುವ ಪತ್ರಿಕೆ—----

ಅ) ವಿಜಯ ಕರ್ನಾಟಕ. ಆ) ಬಾಲಮಂಗಳ.

ಇ) ಪ್ರಜಾವಾಣಿ ಈ) ಸಂಯುಕ್ತ ಕರ್ನಾಟಕ

III. ಸರಿ ತಪ್ಪುಗಳನ್ನು ಗುರುತಿಸಿ ತಪ್ಪಿದ್ದರೆ ಸರಿಪಡಿಸಿ ಬರೆ (ಸು)

7. ಜಗತ್ತನ್ನು ಬೆಳಗುವ ಸೂರ್ಯ ಬಹಳ ಚಿಕ್ಕವನು.

8. ನಮ್ಮ ಮಗಳಿಗೆ ಗಜರಾಜನೇ ತಕ್ಕವರ.

IV. ಆವರಣದಲ್ಲಿ ಸೂಚಿಸಿರುವಂತೆ ಬರೆ.

9. ಬೆಳಕು (ಈ ಪದಕ್ಕೆ ವಿರುದ್ಧಾರ್ಥಕ ಪದ ಬರೆ.) (ಸುಲಭ)

10. ಕುಟುಂಬ (ಈ ಪದಕ್ಕೆ ಬಹುವಚನ ರೂಪ ಬರೆ.) (ಸುಲಭ)

11.ಕುಂಬಲಕಾಯಿ-ಕುಂಬಳಕಾಯಿ (ಈ ಪದಗಳಲ್ಲಿ ಸರಿಯಾದ ರೂಪಕ್ಕೆ ವೃತ್ತಹಾಕು.) (ಸುಲಭ)

12.ದೊಡ್ಡವರು. (ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ.) (ಸಾಧಾರಣ)

13.ಬಹಳ (ಈ ಪದಕ್ಕೆ ಸಮನಾರ್ಥಕ ಪದಗಳನ್ನು ಬರೆಯಿರಿ.) (ಸಾಧಾರಣ)

V. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸು.

14.ಮಗಳಿದ್ದಳು ಆ ಒಬ್ಬ ಸಂಸಾರದಲ್ಲಿ.(ಸಾಧಾರಣ)

15.ಸೇರಿ ಬಳಿಗೆ ಮೋಡದ ಹೋದವು ಎಲ್ಲರೂ. (ಸಾಧಾರಣ)

VI. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು.

16.ಇಲಿಗಳು ಮೊದಲು ಯಾರ ಬಳಿ ಹೋದವು? (ಸುಲಭ)

17.ಜಗತ್ತನ್ನು ಬೆಳಗುವವರು ಯಾರು? (ಸುಲಭ)

18.ಮಗಳಿಗೆ ತಕ್ಕ ವರ ಯಾರು ಎಂದು ಇಲಿಗಳು ತೀರ್ಮಾನಿಸಿದವು?(ಸುಲಭ)

19.ತಂದೆ ತಾಯಿ ಇಲಿಗಳು ಏನೆಂದು ಯೋಚಿಸಿದವು.

VII. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸು

20. ತಂದೆ ಇಲಿಯು ಏನೆಂದು ಹೇಳಿತು?(ಕ)

21."ಮೋಡ ನನಗಿಂತಲೂ ದೊಡ್ಡವನು".ಈ ಮಾತನ್ನು ಯಾರು ಯಾರಿಗೆ ಹೇಳಿದರು. (ಸಾಧಾರಣ)

22. '0' ಅನುಸ್ವಾರದಿಂದ ಪ್ರಾರಂಭವಾಗುವ ನಾಲ್ಕು ಪದಗಳನ್ನು ಬರೆ. (ಸಾಧಾರಣ)

VIII. 23. ಕೊಟ್ಟಿರುವ ಅಕ್ಷರ ಬಳಸಿ 8 ಆಟಗಳ ಹೆಸರನ್ನು ಹುಡುಕಿ ವೃತ್ತ ಹಾಕಿ ಬರೆ. (ಸಾ)

ಪ	ಸ	ಗೇ	ಪ	ದೇ	ರ	ವಾ	ಲಿ	ಬಾ	ಲ್
ಗ	ರಂ	ಚ	ರು	ಕಿ	ಚಿ	ನ	ಪ	ದ	ಗ
ಡೆ	ಸ	ದು	ಕ	ಣ್ಣಾ	ಮು	ಚ್ಚಾ	ಲೆ	ರ	ಕೇ

ಯಾ	ಚ	ರಂ	ಸು	ಗ	ಅ	ಮ	ಸ	ದ	ರಂ
ಟ	ದ	ಗ	ಹಾ	ಕಿ	ಗಾ	ಕ್ರಿ	ಕೆ	ಟ್	ಅ
ದ	ಮ	ಸೂ	ನೇ	ಳ	ಯಾ	ದ	ಲ	ಗೋ	ರಿ

V. ಯೋಜನಾ ಕಾರ್ಯ

24.. ನಿನ್ನ ಶಾಲೆಯಲ್ಲಿ ನಡೆಸಲಿರುವ ವಾರ್ಷಿಕೋತ್ಸವ ಕಾರ್ಯಕ್ರಮದ ಪ್ರಚಾರಕ್ಕಾಗಿ ಒಂದು ಬಿತ್ತಿ ಪತ್ರ ತಯಾರಿಸು . (ಯೋಜನಾ ಕಾರ್ಯ) (ಕಠಿಣ)

ಘಟಕ 07: ಬೀಸೋ ಕಲ್ಲಿನ ಪದ (ಪದ್ಯ)

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	7	8	37%
2.	ಗ್ರಹಿಕೆ	9	16	47%
3.	ಅಭಿವ್ಯಕ್ತಿ	3	8	16%
4.	ಪ್ರಶಂಸೆ	-	-	-
ಒಟ್ಟು		19	32	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	12	18	63%
2.	ಸುಲಭ	3	6	16%
3.	ಕಠಿಣ	4	2	21%
ಒಟ್ಟು		19	32	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 07: ಬೀಸೋ ಕಲ್ಲಿನ ಪದ (ಪದ್ಯ)

ಕಲಿಕಾ ಫಲ 06 : ಓದಿದ ವಿಷಯ ವಸ್ತು ಮತ್ತು ತಮಗೆ ದೈನಂದಿನ ಜೀವನದಲ್ಲಿ ಸ್ವತಃ ಆದ ಅನುಭವಗಳನ್ನು ಸೇರಿಸಿ, ಅವುಗಳಿಂದ ಉಂಟಾದ ಸಂವೇದನಾತ್ಮಕ ಮತ್ತು ವಿಚಾರಗಳನ್ನು ಮೌಖಿಕವಾಗಿ / ಲಿಖಿತವಾಗಿ ಅಭಿವ್ಯಕ್ತ ಪಡಿಸುತ್ತಾರೆ (ಆಡು ಭಾಷೆ / ಗ್ರಾಂಥಿಕ ಭಾಷೆ) .

I. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.(ಸುಲಭ)

1. ಬೀಸೋ ಕಲ್ಲಿನ ಹಿಡಿಗೂಟದ ಹೆಸರೇನು?

2. ರಾಜಾನ್ನ ಯಾವಾಗ ಹೆಚ್ಚುತ್ತದೆ?

3. ಯಾವುದರ ಮೇಲೆ ಮಗ ಬರಲಿ ಎಂದು ತಾಯಿ ಹೇಳಿದ್ದಾಳೆ?

4. ಬೀಸೋಕಲ್ಲಿಗೆ ಯಾವ ಆರತಿ ಬೆಳಗುವರು?

II. 5. ಈ ಕೆಳಗಿನ ಪದಗಳ ಅರ್ಥವನ್ನು ಹೊಂದಿಸಿ ಬರೆಯಿರಿ.(ಸುಲಭ)

ಎ. ಆರತಿ	ಕಲ್ಲು
ಬಿ, ಸಿಟ್ಟು	ಮರದ ಹಿಡಿ
ಸಿ. ಭಾಗ್ಯ	ಕಾರ್ಯ
ಡಿ. ಅಡಿಗಲ್ಲು	ಕೋಪ
ಇ. ಗೂಟ	ಅದೃಷ್ಟ
ಎಫ್. ಕೆಲಸ	ದೀಪ

III.ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಪದ ರಚಿಸಿ : (ಸುಲಭ)

6. ದಾರಯಾತಿಲ್ಲಾಬೆ

7. ಸಯೇಸತಿರ

8. ಲ್ಲಜಲ್ಲಾಜನೆ

9. ಕಬೀಸೋಲ್ಲು

IV.ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿ .   (ಸುಲಭ)

10. ಮೊದಲಿಗೆ ಬೀಸುವ ಕಲ್ಲನ್ನು ಕುರಿತು ಹೇಗೆ ಪ್ರಾರ್ಥಿಸುಗಳು?

11. ಯಾವಾಗ ತಾಯಿ ತನ್ನ ಬಲದೋಳನ್ನು ಕೈಬೀಸಿ ಬಿಡುತ್ತಾಳೆ?

V. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ

12. ಈ ಪದ್ಯದಲ್ಲಿ ಬರುವ ಆಡು ಭಾಷೆ ಪದಗಳನ್ನು ಗುರುತಿಸಿ ಬರೆ.   (ಸಾಧಾರಣ)

13. ಈ ಪದ್ಯದಲ್ಲಿ ಬರುವ ನಾನಾರ್ಥ ಪದಗಳನ್ನು ಗುರುತಿಸಿ ಅರ್ಥ ಬರೆ.   (ಕಠಿಣ)

14. ಈ ಪದ್ಯದಲ್ಲಿರುವ ಮೂರು ಅಕ್ಷರದ ಪದಗಳನ್ನು ಹುಡುಕಿ ಬರೆ.   (ಸಾಧಾರಣ)

15. ಮನೆಯಲ್ಲಿ ಮತ್ತು ಶಾಲೆಯಲ್ಲಿ ನೀವು ಪ್ರತಿನಿತ್ಯ ಬಳಸುವ ಕನ್ನಡೇತರ ಪದಗಳನ್ನು ಪಟ್ಟಿ ಮಾಡಿರಿ.   (ಸಾಧಾರಣ)

16. ನಿಮ್ಮೂರಿನ ಹಿರಿಯರಿಂದ ಒಂದೊಂದು ಸೋಬಾನೆ ಪದ, ಜೋಗುಳ ಹಾಡು, ಗೀಗಿ ಪದ, ಲಾವಣಿ ಪದಗಳನ್ನು ಸಂಗ್ರಹಿಸಿ ಒಂದು ಯೋಜನೆ ತಯಾರಿಸು. (ಕಠಿಣ)

17. ಈ ಪದ್ಯದಲ್ಲಿ ನಿನಗೆ ಇಷ್ಟವಾದ ಪದ್ಯ ಭಾಗ ಯಾವುದು? ಏಕೆ? (ಕಠಿಣ)

18. ರೈತರಿಗೆ ಸಂಬಂಧಿಸಿದ ಕೆಲವು ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆ. (ಕಠಿಣ)

VI. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ : (ಸುಲಭ)

19. ಅಂದುಳ್ಳ ------------------------- ನೆನೆದೇನಾ.

ಘಟಕ 08: ತಾಯಿಗೊಂದು ಪತ್ರ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	8	8	28%
2.	ಗ್ರಹಿಕೆ	12	14	41%
3.	ಅಭಿವ್ಯಕ್ತಿ	8	17	28%
4.	ಪ್ರಶಂಸೆ	1	3	3%
ಒಟ್ಟು		29	42	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	14	17	48%
2.	ಸುಲಭ	10	13	34%
3.	ಕಠಿಣ	5	12	17%
ಒಟ್ಟು		29	42	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 08: ತಾಯಿಗೊಂದು ಪತ್ರ

ಕಲಿಕಾ ಫಲ 14: ವಿವಿಧ ಪರಿಸ್ಥಿತಿ ಮತ್ತು ಉದ್ದೇಶಗಳಿಗೆ (ಸೂಚನಾ ಫಲಕದಲ್ಲಿ ಹಾಕಿರುವ ಸೂಚನೆಗಳು, ವಸ್ತುಗಳ ಪಟ್ಟಿ, ಕಲೆ, ಕವಿತೆ, ಪತ್ರ, ಪ್ರಬಂಧ ಮುಂತಾದವು) ಅನುಸಾರವಾಗಿ ಬರೆಯುತ್ತಾರೆ

I ಕೆಳಗಿನ ಪದಗಳಿಗೆ ಸರಿಯಾದ ಅರ್ಥ ಬರೆಯಿರಿ .(ಸುಲಭ)

1) ತಂಡ: ______(ಗುಂಪು, ರಾಶಿ, ಗುಡ್ಡೆ, ಒಟ್ಟಿಗೆ)

2) ಗರ್ಜನೆ: _______(ದಪ್ಪದಾಗಿ ಕೂಗು, ಗಟ್ಟಿಯಾಗಿ ಕೂಗು, ಏರು ಧ್ವನಿ,)

II. ವಚನ ಬದಲಿಸಿ ಬರೆಯಿರಿ .(ಸುಲಭ)

3) ಮಗು

4) ಪ್ರಾಣಿಗಳು

5) ಕವಿ

6) ಗೆಳೆಯ

7) ಹಕ್ಕಿ

8) ಕೋತಿಗಳು

III. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ .(ಸುಲಭ)

9) ಬನ್ನಿ × _______

10) ಮೇಲೆ × ______

11) ಸಂತೋಷ × ________

12) ಮುಂದೆ × __________

IV. ಸ್ವಂತ ವಾಕ್ಯ ರಚಿಸಿ.(ಸಾಧಾರಣ)

13)ಸಂತೋಷ:

14)ಸಮಾಚಾರ:

15) ತಂಡ:

V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. (ಸಾಧಾರಣ)

16) ಮಕ್ಕಳು ಮೃಗಾಲಯದಲ್ಲಿ ನೋಡಿದ ಪ್ರಾಣಿಗಳ ಹೆಸರು ಬರೆ.

17) ಮೃಗಾಲಯದಲ್ಲಿ ಕತ್ತು ಉದ್ದವಿದ್ದ ಪ್ರಾಣಿ ಯಾವುದು?

18) ಮೃಗಾಲಯದಲ್ಲಿ ಇದ್ದ ಹಾವುಗಳನ್ನು ಎಲ್ಲಿಂದ ತಂದು ಇಟ್ಟಿದ್ದರು?

19) ಆನೆಯ ಮೇಲಿನ ಅಂಬಾರಿಯಲ್ಲಿ ಯಾವ ದೇವರ ಚಿತ್ರವಿತು?

20) ಮೈಸೂರಿನಲ್ಲಿರುವ ಮೃಗಾಲಯದ ಹೆಸರೇನು?

VI. ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ

21) ನೀನು ರಜಾ ಅವಧಿಯಲ್ಲಿ ಎಲ್ಲಿಗೆ ಹೋಗಿ ಏನನ್ನ ನೋಡಿ ಬಂದಿರುವೆ ಬರೆ. .(ಕಠಿಣ)

22) ನಿನ್ನ ಮನೆಯಲ್ಲಿ ಸಾಕಿರುವ ಪ್ರಾಣಿ ಪಕ್ಷಿಗಳ ಬಗ್ಗೆ ಬರೆದು ತಿಳಿಸು. .(ಸುಲಭ)

23) ಪತ್ರ ಬರೆಯುವಾಗ ಯಾವ ಅಂಶಗಳು ತುಂಬಾ ಮುಖ್ಯವಾಗಿರುತ್ತದೆ ತಿಳಿಸು. .(ಸಾಧಾರಣ)

V II. ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸು.

24) ನಿನ್ನ ಶಾಲೆಯಲ್ಲಿ ನಡೆದ ಆಟೋಟ ಪಂದ್ಯಾವಳಿಯಲ್ಲಿ ನೀನು ಭಾಗವಹಿಸಿರುವ ಬಗ್ಗೆ ನಿನ್ನ ಗೆಳತಿಗೆ ಪತ್ರ ಬರೆದು ತಿಳಿಸು. .(ಕಠಿಣ)

25) ನೀನು ಶಾಲೆಯಲ್ಲಿ ಆಸಕ್ತಿವಹಿಸಿ ಮಾಡುವ ಕೆಲಸ ಕಾರ್ಯ ಕಲಿಕೆಯ ಬಗ್ಗೆ ನಿನ್ನ ಪಾಲಕರಿಗೆ ಪತ್ರದಲ್ಲಿ ಬರೆದು ತಿಳಿಸು. . (ಸಾಧಾರಣ)

26) ಈ ಕೆಳಗಿನ ಪ್ರಾಣಿಗಳ ಚಿತ್ರ ನೋಡಿ ಅವುಗಳ ಹೆಸರಿಗೆ ಹೊಂದಿಸು. (ಸುಲಭ)

ಅ ಪಟ್ಟಿ	ಬ ಪಟ್ಟಿ
	ಚಿರತೆ
	ಸಿಂಹ
	ಘೇಂಡಾಮೃಗ
	ಜಿರಾಫೆ

2

27) ನಿನ್ನ ಹುಟ್ಟುಹಬ್ಬ ಆಚರಿಸಿದ ಬಗ್ಗೆ ನಿನ್ನ ತರಗತಿ ಶಿಕ್ಷಕರಿಗೆ ಬರೆದು ತಿಳಿಸು. (ಕಠಿಣ)

28) ಮೈಸೂರಿನಲ್ಲಿ ಇರುವ ವಿಶೇಷತೆಗಳ ಬಗ್ಗೆ ನಿನ್ನ ವಾಕ್ಯದಲ್ಲಿ ಬರೆ. (ಕಠಿಣ)

29) ನಿನಗಿಷ್ಟವಾದ ಒಂದು ಪ್ರಾಣಿಯ ಬಗ್ಗೆ ಬರೆ. (ಕಠಿಣ)

ಘಟಕ 09 : ಮಹಿಳಾ ದಿನಾಚರಣೆ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	22	23	43%
2.	ಗ್ರಹಿಕೆ	20	33	39%
3.	ಅಭಿವ್ಯಕ್ತಿ	7	15	14%
4.	ಪ್ರಶಂಸೆ	2	8	4%
ಒಟ್ಟು		51	79	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	18	23	35%
2.	ಸುಲಭ	28	38	55%
3.	ಕಠಿಣ	5	18	10%
ಒಟ್ಟು		51	79	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 09 : ಮಹಿಳಾ ದಿನಾಚರಣೆ

ಕಲಿಕಾ ಫಲ:9. ವಿವಿಧ ಸಾಹಿತ್ಯ ರಚನೆಗಳಲ್ಲಿ ಬರುವ ಹೊಸ ಶಬ್ದಗಳನ್ನು ಸಾಂದರ್ಭಿಕವಾಗಿ ಗ್ರಹಿಸಿ ಅವುಗಳ ಅರ್ಥವನ್ನು ತಿಳಿದುಕೊಳ್ಳುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆ. (ಸುಲಭ)

1. ಇದು ವಂದನೆ ಪದದ ಅರ್ಥ

ಅ. ಸ್ವಾಗತ. ಆ. ತೃಪ್ತಿಕರ. ಇ. ನಮಸ್ಕಾರ. ಈ. ಹೆಸರು

2. ಜೀವನದಲ್ಲಿ ಈ ಪದವನ್ನು ಬಿಡಿಸಿ ಬರೆದಾಗ

ಅ. ಜೀವನ+ದಲ್ಲಿ. ಆ. ಜೀವನ+ಅಲ್ಲಿ

ಇ. ಜೀವನ+ಯಲ್ಲಿ. ಈ. ಜೀವನ+ಆದಲ್ಲಿ

3. ಸಂಚಿ ಹೊನ್ನಮ್ಮ ಈ ಕ್ಷೇತ್ರದಲ್ಲಿ ಸಾಧನೆ ಮಾಡಿದರು

ಅ. ಸಾಹಿತ್ಯ ಆ. ಕ್ರೀಡೆ ಇ. ರಾಜಕೀಯ. ಈ. ಶಿಕ್ಷಣ

4. 'ಗಣ್ಯ' ಪದದ ವಿರುದ್ಧ ಪದ ಇದಾಗಿದೆ

ಅ. ಅಗಣ್ಯ ಆ. ಪ್ರಗಣ್ಯ ಇ. ಪ್ರಸಿದ್ಧ ಈ. ನಗಣ್ಯ

II . 5. ಹೊಂದಿಸಿ ಬರೆ. (ಸುಲಭ)

ಎ. ಸಾವಿತ್ರಿಬಾಯಿ ಫುಲೆ.	-	ಬಾಹ್ಯಾಕಾಶ
ಬಿ. ವಿಜಯಲಕ್ಷ್ಮಿ ಪಂಡಿತ್	-	ಸಂಗೀತ ಕ್ಷೇತ್ರ
ಸಿ. ಲತಾ ಮಂಗೇಶ್ಕರ್.	-	ಸ್ವಾತಂತ್ರ್ಯ ಹೋರಾಟ
ಡಿ. ಸುನೀತಾ ವಿಲಿಯಮ್ಸ್	-	ರಾಜಕೀಯ ಕ್ಷೇತ್ರ
ಎಫ್. ರಾಣಿ ಅಬ್ಬಕ್ಕ.	-	ಶಿಕ್ಷಣ ಕ್ಷೇತ್ರ

III. ಗುಂಪಿಗೆ ಸೇರದ ಪದ ಗುರ್ತಿಸಿ ಬರೆ.(ಸುಲಭ)

6. ಪೋಷಣೆ, ಪಾಲನೆ, ರಕ್ಷಣೆ, ನಿರೂಪಣೆ

7. ಪಿ.ಟಿ.ಉಷಾ, ಕಮಲ ಹಂಪನಾ, ಪಿ.ವಿ. ಸಿಂಧು, ಸೈನಾ ನೆಹ್ವಾಲ್.

8. ಕಾರ್ಯಕ್ರಮ, ನಿರೂಪಣೆ, ಭಾಷಣ, ಮನೆ.

9. ಪಥ, ದಾರಿ, ಹಾದಿ, ವಿಸ್ಮಯ.

IV. ಅಕ್ಷರಗಳನ್ನು ಸರಿಯಾಗಿ ಜೋಡಿಸಿ, ಅರ್ಥಪೂರ್ಣ ಪದ ರಚಿಸು. (ಸಾಧಾರಣ)

10. ಣೆ ರ ಚ ನಾ ದಿ -

11.ಕಾ ಮ ಕ್ರ ರ್ಯ. -

12. ಕಾ ಬಾ ಶ ಹ್ಯಾ-

13. ತ್ರ ಚಿ ವ ಭಾ. -

V. ಬಿಟ್ಟ ಸ್ಥಳವನ್ನು ಸೂಕ್ತಪದದೊಂದಿಗೆ ಭರ್ತಿ ಮಾಡು. (ಸಾಧಾರಣ)

14. ಅನೇಕ ಮಹಿಳೆಯರ ಭಾವಚಿತ್ರಗಳಿಗೆ______________ಹಾಕಿ ಸಿಂಗರಿಸಿದ್ದೇವೆ.

15. ಮಕ್ಕಳೆಲ್ಲರೂ______________ಆಲಿಸುವುದರಲ್ಲಿ ಮೈಮರೆತ್ತಿ ದ್ದರು .

16. ______________ಯವರ ಸಹಕಾರದಿಂದ ಎಲ್ಲರಿಗೂ ಸಿಹಿ ಹಂಚಲಾಯಿತು.

17. ಕಮಲಾದೇವಿ ಚಟ್ಟೋಪಾಧ್ಯಾಯ ______________ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

VI. ಈ ಕೆಳಗಿನ ಮಾತುಗಳನ್ನು ಯಾರು? ಯಾರಿಗೆ? ಹೇಳಿದರು. (ಸಾಧಾರಣ)

18. ಮಕ್ಕಳೇ , ಈ ದಿನದ ವಿಶೇಷ ನಿಮಗೀಗಾಗಲೇ ತಿಳಿದಿದೆಯಲ್ಲವೇ ?

ಯಾರು?------ ಯಾರಿಗೆ ?------------

19. ನೀವು ಹೇಳಿದಂತೆ ಶಾಲಾ ಆವರಣ ಸ್ವಚ್ಛ ಮಾಡಿದ್ದೇವೆ.

ಯಾರು ?---------- ಯಾರಿಗೆ ?---------

VII. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸು. (ಸಾಧಾರಣ)

20. ಸಡಗರ -------------------------------------

21. ಆಚರಣೆ--

22. ಸಹಕಾರ ------------------------------------

VIII. ಕೆಳಗಿನ ವಾಕ್ಯಗಳನ್ನು ಗಮನಿಸಿ, ಸರಿ -ತಪ್ಪು ಗುರುತಿಸಿ, ತಪ್ಪಿದ್ದರೆ ಸರಿಪಡಿಸಿ ಬರೆ. (ಸಾಧಾರಣ)

23. ಮಾರ್ಚ್ ೮ ರಂದು ಅಂತರರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಣೆ ಮಾಡಲಾಗುತ್ತದೆ

.24. ಆಧುನಿಕ ಮಹಿಳೆಯರು ಕೆಲಸದಲ್ಲಿ ಸಮಾನ ಅವಕಾಶ ಪಡೆದುಕೊಂಡಿಲ್ಲ.

25. ಎಂ. ಎಸ್.ಸುಬ್ಬಲಕ್ಷ್ಮಿ ಕ್ರೀಡಾಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

26. ಕಾರ್ಯಕ್ರಮ ನಾಡಗೀತೆಯೊಂದಿಗೆ ಮುಕ್ತಾಯವಾಯಿತು.

IX. ಮೂರನೆ ಪದಕ್ಕೆ ಸಂಬಂಧ ಕಲ್ಪಿಸಿ ಬರೆ. (ಸಾಧಾರಣ)

27. ಶೇಖರ್ : ನಿರೂಪಣೆ :: ಸುಮತಿ :----------

28. ತಿರುಮಲಾಂಬ :ಸಾಹಿತ್ಯ :: ಮೇರಿ ಕೋಮ್ : ----

29. ಸಿಂಗರಿಸು : ಅಲಂಕರಿಸು :: ಸಹಕಾರ :----------

30. ಮುಕ್ತಾಯ : ಆರಂಭ :: ಹಿಂದೆ :------------------

X. ಸೂಚನೆಯಂತೆ ಉತ್ತರಿಸು.

31.ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆ. (ಸಾಧಾರಣ)

ಪ್ರೀತಿ * ----------

ಗೌರವ*--------------

32. ಬಹುವಚನ ರೂಪ ಬರೆ. (ಸಾಧಾರಣ)

ಅತಿಥಿ---------------

ಶಿಕ್ಷಕ ---------------

33. ಸಮಾನಾರ್ಥಕ ಪದಗಳನ್ನು ಬರೆ. (ಸಾಧಾರಣ)

ಕಾರ್ಯ :

34. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆ.

ಕ್ಷೇತ್ರದಲ್ಲಿ =.

ಭಾಷಣವನ್ನು =

35. ಲಿಂಗ ಬದಲಿಸಿ ಬರೆ/ಸ್ತ್ರೀ ರೂಪ ಬರೆ . (ಸಾಧಾರಣ)

ಶಿಕ್ಷಕ---------

ಪುರುಷ---------

XI. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸು. (ಸುಲಭ)

36. ಮಹಿಳಾ ದಿನಾಚರಣೆ ಕಾರ್ಯಕ್ರಮದ ನಿರೂಪಣೆಯನ್ನು ಯಾರು ಮಾಡಿದರು ?
37.ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾರ್ಥಿಸಿದವರು ಯಾರು ?

38. ಕಾರ್ಯಕ್ರಮದಲ್ಲಿ ಎಲ್ಲರನ್ನು ಯಾರು ಸ್ವಾಗತಿಸಿದರು ?

39. ಮಾರ್ಚ್ ೮ ರ ವಿಶೇಷತೆ ಏನು ?

40. ಮಹಿಳಾ ದಿನಾಚರಣೆ ಮಹತ್ವ ಕುರಿತು ಪ್ರಾಸ್ತವಿಕ ನುಡಿಗಳನ್ನು ನುಡಿದವರಾರು ?

41. ಮದರ್ ತೆರೇಸಾ ರವರು ಯಾವ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ ?

42. ಪಿ.ವಿ . ಸಿಂಧೂ ರವರು ಸಾಧನೆ ಮಾಡಿರುವ ಕ್ಷೇತ್ರ ಯಾವುದು?

43. ಕಾರ್ಯಕ್ರಮದಲ್ಲಿ ಎಲ್ಲರನ್ನು ಯಾರು. ವಂದಿಸಿದರು?

XII. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ.

44. ಮಹಿಳಾ ದಿನಾಚರಣೆ ಯಾವುದರ ಸಂಕೇತವಾಗಿದೆ?(ಕಠಿಣ)

45. ಮಹಿಳೆಯರು ಯಾವ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ ? (ಸಾಧಾರಣ)

46. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದಂತಹ ಯಾವುದಾದರೂ ನಾಲ್ಕು ಮಹಿಳೆಯರನ್ನು ಹೆಸರಿಸಿ.(ಸಾಧಾರಣ)

47.ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಯಾರಾದರು ನಾಲ್ಕು ಮಹಿಳೆಯರನ್ನು ಹೆಸರಿಸಿ (ಸಾ)

XIII. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸು.

48. ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಎಸ್.ಡಿ. ಎಂ.ಸಿ. ಅಧ್ಯಕ್ಷರ ಭಾಷಣ ಕುರಿತ ಅಂಶಗಳನ್ನು ಬರೆ (ಕಠಿಣ) .

49. ಮಹಿಳಾ ದಿನದ ಆಚರಣೆ ಕುರಿತು ನಿನ್ನ ಅಭಿಪ್ರಾಯವೇನು ?(ಕಠಿಣ)

50. ಒನಕೆ ಓಬವ್ವ ಳ ಸಾಹಸ ಕುರಿತಂತೆ ನಿನಗೆ ತಿಳಿದಿರುವಂತೆ ಬರೆ (ಕಠಿಣ).

51. ನಿನಗೆ ತಿಳಿದಿರುವ ಒಬ್ಬ ಮಹಿಳಾ ಸಾದಕಿಯ ಬಗ್ಗೆ ಪ್ರಬಂಧ ಬರೆ.(ಕಠಿಣ)

ಘಟಕ 10 : ಸರ್ವಜ್ಞನ ತ್ರಿಪದಿಗಳು

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	8	8	35%
2.	ಗ್ರಹಿಕೆ	10	15	43%
3.	ಅಭಿವ್ಯಕ್ತಿ	4	10	17%
4.	ಪ್ರಶಂಸೆ	1	3	5%
ಒಟ್ಟು		23	36	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	16	17	70%
2.	ಸುಲಭ	4	10	17%
3.	ಕಠಿಣ	3	9	13%
ಒಟ್ಟು		23	36	100%

ಘಟಕ 10 : ಸರ್ವಜ್ಞನ ತ್ರಿಪದಿಗಳು

ಕಲಿಕಾ ಫಲ:-07 ವಿವಿಧ ಸಾಹಿತ್ಯಗಳನ್ನು ಪರಸ್ಪರ ಕೇಳಲು ಓದಲು ಮತ್ತು ಅವುಗಳ ಮೇಲೆ ತಮ್ಮ ಅನಿಸಿಕೆ ನೀಡಲು ಅವುಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಸೇರಿಸಲು ವಿಸ್ತರಿಸಲು ಮತ್ತು ಬೇರೆ ಬೇರೆ ವಿಧಾನದಲ್ಲಿ ಬರೆಯುತ್ತಾರೆ.

I. ಚಿತ್ರದಲ್ಲಿರುವವರನ್ನು ಗುರುತಿಸಿ ಹೆಸರಿಸು (ಸುಲಭ)

1.



II .2.ಹೊಂದಿಸಿ ಬರೆಯಿರಿ. (ಸುಲಭ)

ಎ. ಬಸವಣ್ಣ	-	ಕೃತಿಗಳು
ಬಿ. .ಕನಕದಾಸ	-	ತ್ರಿಪದಿಗಳು
ಸಿ. ಸರ್ವಜ್ಞ	-	ವಚನಗಳು
ಡಿ. ಕುವೆಂಪು	-	ಕೀರ್ತನೆಗಳು

III.ಮೂರನೆಯ ಪದಕ್ಕೆ ಸಂಬಂಧ ಕಲ್ಪಿಸಿ ಬರೆ. (ಸುಲಭ)

3. ಪರ್ವತ : ಬೆಟ್ಟ:: ನುಡಿ :________

4. ಬಚ್ಚಿಡು : ಮುಚ್ಚಿಡು :: ಪರರು :______

IV. ಬಿಟ್ಟ ಸ್ಥಳವನ್ನು ತುಂಬು. (ಸುಲಭ)

5. ಕೊಟ್ಟಿದ್ದು: ತನಗೆ :: ಬಚ್ಚಿಟ್ಟಿದ್ದು:_______

6. ಇರುವುದೊಂದೇ : ಭೂಮಿ :: ಕುಡಿಯುವುದು ಒಂದೇ :_____

V.ವಿರುದ್ದ ಪದಗಳನ್ನು ಬರೆ. (ಸುಲಭ)

7 ಸಜಾತಿ ×
8.ಮುಂದೆ ×
9.ಧರ್ಮ ×
10.ಪಾಪ ×
11.ಸುಖ ×

VI .ಒಂದು ವಾಕ್ಯದಲ್ಲಿ ಉತ್ತರಿಸಿ. (ಸುಲಭ)

12. ತ್ರಿಪದಿಗಳು ಎಂದರೇನು?

13. ಜಾತ ಎಂದರೆ ಯಾರು?

14.ಜಾತಿಗೆ ಹೀನನ ಮನೆಯಲ್ಲಿ ಯಾವುದು ಹೀನವಲ್ಲ?

15.ಯಾವುದಕ್ಕೆ ಕೆಟ್ಟೆ ಎನ್ನಬಾರದು ?

16.ಸುಡುವಾಗ್ನಿ ಎಂದು ಯಾವುದಕ್ಕೆ ಹೇಳಿದ್ದಾರೆ?

VII . ಬಿಟ್ಟ ಪದ್ಯ ಭಾಗವನ್ನು ತುಂಬಿರಿ. (ಸುಲಭ)

17. ಕೊಟ್ಟಿದ್ದು ತನಗೆ_______

____

____________ ಸರ್ವಜ್ಞ

VIII. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿ . .

18.ಜಾತಿ ಭೇದವನ್ನು ಕುರಿತ ಸರ್ವಜ್ಞನ ತ್ರಿಪದಿಯನ್ನು ಬರೆಯಿರಿ (ಸಾಧಾರಣ)

19. ಪ್ರಕೃತಿ ಎಲ್ಲರಿಗೂ ಒಂದೇ ಎಂದು ಸರ್ವಜ್ಞ ತನ್ನ ತ್ರಿಪದಿಯಲ್ಲಿ ಹೇಗೆ ಹೇಳಿದ್ದಾರೆ? (ಸಾಧಾರಣ)

20. ನಾವು ಮಾಡುವ ಧರ್ಮ ಹೇಗಿರಬೇಕು? (ಸಾಧಾರಣ)

IX.ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸು.

21.ನೀನು ನಿನ್ನ ತರಗತಿಯಲ್ಲಿ ಮಾಡುವ ಕೊಠಡಿಯ ಸ್ವಚ್ಛತೆಯ ಬಗ್ಗೆ ಎರಡು ಮೂರು ವಾಕ್ಯಗಳಲ್ಲಿ ಬರೆ (ಕಠಿಣ)

22. ನೀನು ನಿನ್ನ ಗೆಳೆಯರಿಗೆ ಹೇಗೆ ಸಹಾಯ ಮಾಡುವೆ ಎಂಬುದನ್ನು ಎರಡು ಮೂರು ವಾಕ್ಯಗಳಲ್ಲಿ ಬರೆ (ಕಠಿಣ)

23. ಶಾಲೆಯಲ್ಲಿ ಸಮವಸ್ತ್ರ ಧರಿಸಬೇಕು ಏಕೆ? (ಕಠಿಣ)

ಘಟಕ 11: ವೀರ ಅಭಿಮನ್ಯು

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	5	12	19%
2.	ಗ್ರಹಿಕೆ	14	23	54%
3.	ಅಭಿವ್ಯಕ್ತಿ	6	16	23%
4.	ಪ್ರಶಂಸೆ	1	4	4%
ಒಟ್ಟು		26	55	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	9	13	35%
2.	ಸುಲಭ	10	22	38%
3.	ಕಠಿಣ	7	20	27%
ಒಟ್ಟು		26	55	100%

ಘಟಕ 11: ವೀರ ಅಭಿಮನ್ಯು

ಕಲಿಕಾಫಲ 12 : ಭಾಷೆಯ ಸೂಕ್ಷ್ಮತೆಗಳ, ಉದಾಹರಣೆಗೆ : ಶಬ್ದಗಳ ಪುನರಾವರ್ತನೆ, ಸರ್ವನಾಮ, ವಿಶೇಷಣ, ಲಿಂಗ, ವಚನ ಮುಂತಾದವುಗಳ ಬಗ್ಗೆ ಗಮನವಿರಿಸಿಕೊಂಡು ಬರೆಯುತ್ತಾರೆ. ವಿವಿಧ ಪದಗಳನ್ನು ಮೆಚ್ಚಿ ಬಳಸುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು. (ಸುಲಭ)

1. ಚಕ್ರವ್ಯೂಹವನ್ನು ಭೇದಿಸುವುದು ಯಾರು ಯಾರಿಗೆ ಗೊತ್ತಿತ್ತು ?
2. ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸುವುದನ್ನು ಯಾವಾಗ ಕಲಿತಿದ್ದ?
3. ದ್ರೋಣಾಚಾರ್ಯರು ಎಷ್ಟನೆಯ ದಿನ ಚಕ್ರವ್ಯೂಹವನ್ನು ರಚಿಸಿದ್ದರು?
4. ಚಕ್ರವ್ಯೂಹವನ್ನು ರಚಿಸಿದ್ದ ದಿನ ಕೃಷ್ಣಾರ್ಜುನರು ಎಲ್ಲಿಗೆ ಹೋಗಿದ್ದರು?

II. ಆವರಣದಲ್ಲಿರುವ ಉತ್ತರಗಳನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆ.

(ಶ್ರೀಕೃಷ್ಣಪರಮಾತ್ಮ , ಚಕ್ರವನ್ನು , ಸುಮಿತ್ರ , ದ್ರೋಣಾಚಾರ್ಯ)

5.ಕೌರವರಿಗೂ ಪಾಂಡವರಿಗೂ ಬಿಲ್ವಿದ್ಯೆ ಕಲಿಸಿದವರು...................... (ಸುಲಭ)

6.ಅಭಿಮನ್ಯು ಚಕ್ರವ್ಯೂಹ ಭೇದಿಸುವುದನ್ನು ....ನಿಂದ ತಿಳಿದುಕೊಂಡಿದ್ದನು (ಸುಲಭ)

7.ಅಭಿಮನ್ಯು ಕೈಯಲ್ಲಿ ರಥದ....................... ಹಿಡಿದು ಹೋರಾಡಿದನು. (ಸುಲಭ)

8. ಅಭಿಮನ್ಯುವಿನ ಸಾರಥಿಯ ಹೆಸರು .... (ಸುಲಭ)

III. 9.ಕೆಳಗೆ ಕೊಟ್ಟಿರುವ ಲೇಖನ ಚಿಹ್ನೆಗಳನ್ನು ಹೊಂದಿಸಿ ಬರೆ. (ಸುಲಭ)

ಎ.ಭಾವಸೂಚಕ ಚಿಹ್ನೆ	-	(,)
ಬಿ. ಪೂರ್ಣವಿರಾಮ ಚಿಹ್ನೆ	-	(“..........”)
ಸಿ. ಉದ್ಧರಣ ಚಿಹ್ನೆ	-	(.)
ಡಿ. ಅಲ್ಪ ವಿರಾಮ ಚಿಹ್ನೆ	-	(?)
ಇ. ಪ್ರಶ್ನಾರ್ಥಕ ಚಿಹ್ನೆ		(!)

IV. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸು. (ಸಾಧಾರಣ)

10.ಪರಿಣಿತ

11.ಚಿಂತಾಕ್ರಾಂತ

V. ಸರಿಯಾದ ಉತ್ತರ ಆರಿಸಿ ಬರೆ. (ಸಾಧಾರಣ)

12. ‘ಯುದ್ಧ’ ಪದದ ಅರ್ಥ ಇದಾಗಿದೆ

ಎ) ಕದನ ಬಿ) ಸಮರ ಸಿ) ಸಂಗ್ರಾಮ ಡಿ) ಎಲ್ಲವೂ

13. ಕರಿ ಹೊಲದಲ್ಲಿ ಬಿಳಿ ದಾರಿ. ಈ ಒಗಟಿಗೆ ಸರಿಯಾದ ಉತ್ತರವಿದು.

ಎ) ಹೊಲ ಬಿ) ದಾರಿ ಸಿ) ಬೈತಲೆ ಡಿ) ಬಿಳಿ

14. ರಾಧಾ, ಮಲ್ಲಿಗೆ , ರಾಮ, ಚೈತ್ರ ಮತ್ತು ರೇಷ್ಮಾ ಎಲ್ಲರೂ ಪ್ರವಾಸಕ್ಕೆ ಹೊರಟರು. ಈ ವಾಕ್ಯದಲ್ಲಿ ಬರುವ ಅಲ್ಪ ವಿರಾಮ ಚಿಹ್ನೆಗಳ ಸಂಖ್ಯೆ.

ಎ) 3 ಬಿ) 2 ಸಿ) 5 ಡಿ) 4

15.'ಚಕ್ರವ್ಯೂಹ' ಪದದ ಸರಿಯಾದ ಉತ್ತರ __________

ಎ) ಸೇನೆಯ ಒಂದು ತುಕಡಿ ಬಿ) ಸೈನ್ಯಕ್ಕೆ ಇಟ್ಟ ಹೆಸರು

ಸಿ) ಒಂದು ಬಗೆಯ ಸೇನಾ ರಚನೆ ಡಿ) ಒಂದು ಬಗೆಯ ರಥದ ಚಕ್ರ

16.'ಅವರೇಕೆ' ಪದವನ್ನು ಬಿಡಿಸಿ ಬರೆದಾಗ__________

ಎ) ಅವ + ರೇಕೆ ಬಿ) ಅವರು + ಏಕೆ ಸಿ) ಅವರು +ರೇಕೆ ಡಿ) ಅವರು +ಯೇಕೆ

17. ಇವರಲ್ಲಿ ಅಭಿಮನ್ಯುವಿನ ಹೆಂಡತಿ ________________.

ಎ) ಸುಭದ್ರೆ ಬಿ) ಸುಮಿತ್ರ ಸಿ) ಉತ್ತರೆ ಡಿ) ಯಾರೂ ಅಲ್ಲ

VI. ಕೊಟ್ಟಿರುವ ಮಾತನ್ನು ಯಾರು? ಯಾರಿಗೆ ? ಯಾವಾಗ ಹೇಳಿದರು ? (ಕಠಿಣ)

18. "ಅಣ್ಣ ನೀನು ಚಿಂತಿಸಬೇಡ ಚಕ್ರವ್ಯೂಹವನ್ನು ಭೇದಿಸುವ ಸಾಮರ್ಥ್ಯ ವೀರ ಅಭಿಮನ್ಯುವಿನಲ್ಲಿದೆ"

19."ನನ್ನ ಸಾಮರ್ಥ್ಯದ ಮೇಲೆ ನಿಮಗೆ ಶಂಕೆಯೇ?"

VII. ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸು. (ಸಾಧಾರಣ)

20.ಅಭಿಮನ್ಯು ಸುಭದ್ರೆಯ ಬಳಿ ಏನೆಂದು ವಿನಂತಿಸಿಕೊಂಡನು. ?

21.ಕೌರವರ ಕುತಂತ್ರಕ್ಕೆ ವೀರ ಅಭಿಮನ್ಯುವಿನ ವೀರಾವೇಶದ ನುಡಿಗಳಾವುವು ?

VIII .ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸು. (ಕಠಿಣ)

22.ನೀನು ಟಿವಿಯಲ್ಲಿ ನೋಡಿರುವ ಯುದ್ಧದ ದೃಶ್ಯವೊಂದನ್ನು ನಿನ್ನದೇ ಮಾತುಗಳಲ್ಲಿ ವರ್ಣಿಸು . (ಕ)

23. ವೀರ ಅಭಿಮನ್ಯುವಿನ ಗದ್ಯ ಪಾಠದಲ್ಲಿ ಬರುವ ಪಾತ್ರಗಳನ್ನು ಹೆಸರಿಸು. (ಸಾಧಾರಣ)

24.ಯುದ್ಧದಿಂದ ಆಗುವ ಕಷ್ಟ-ನಷ್ಟಗಳ ಕುರಿತು ಬರೆ. (ಕಠಿಣ)

25.ಅಭಿಮನ್ಯು ಧರ್ಮರಾಯನನ್ನು ಯುದ್ಧಕ್ಕೆ ಕಳಿಸುವಂತೆ ಹೇಗೆ ಮನವೊಲಿಸಿದನು ? (ಸಾಧಾರಣ)

26.ಅಭಿಮನ್ಯು ಯುದ್ಧದಲ್ಲಿ ಯಾವ ರೀತಿ ಹೋರಾಡಿ ಮಡಿದನು? (ಕಠಿಣ)

ಘಟಕ 12: ಪ್ರವಾಸ ಹೋಗೋಣ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	8	12	23%
2.	ಗ್ರಹಿಕೆ	11	14	31%
3.	ಅಭಿವ್ಯಕ್ತಿ	10	16	28%
4.	ಪ್ರಶಂಸೆ	1	4	3%
ಒಟ್ಟು		35	46	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	15	15	43%
2.	ಸುಲಭ	16	8	46%
3.	ಕಠಿಣ	4	13	11%
ಒಟ್ಟು		35	46	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 12: ಪ್ರವಾಸ ಹೋಗೋಣ

ಕಲಿಕಾ ಫಲ 03: ಕಥೆ, ಕವಿತೆ ಮತ್ತು ಬೇರೆ ವಸ್ತು ವಿಷಯಗಳನ್ನು ತನ್ನದೇ ರೀತಿಯಲ್ಲಿ ಮತ್ತು ಭಾಷೆಯಲ್ಲಿ ಹೇಳುತ್ತಾ, ಅವರಲ್ಲಿ ತನ್ನದೇ ಸ್ವಂತ ಕಥೆ, ವಿಷಯಗಳನ್ನು ಜೋಡಿಸುತ್ತಾರೆ.

I.1. ಹೊಂದಿಸಿ ಬರೆ. (ಸುಲಭ)

ಎ. ಹಂಪಿ	-	ಬಸದಿ
ಬಿ. ಶ್ರವಣಬೆಳಗೊಳ	-	ವಿರೂಪಾಕ್ಷ ದೇವಾಲಯ
ಸಿ.ಅಜಂತಾ ಎಲ್ಲೋರ	-	ಲಾಲ್ ಬಾಗ್
ಡಿ. ಬೆಂಗಳೂರು	-	ಗುಹಾಂತರ ದೇವಾಲಯ

II. ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದ ಉತ್ತರವಾಗುವಂತೆ ಪ್ರಶ್ನೆಯನ್ನು ರಚಿಸು.(ಸಾ)

2.ವಿಧಾನಸೌಧ ಬೆಂಗಳೂರಿನಲ್ಲಿದೆ.

3. ವಿಮಾನಗಳು ಆಕಾಶದಲ್ಲಿ ಹಾರಾಡುತ್ತವೆ.

4.ಮೇರಿ ಚೆನ್ನಾಗಿ ಓದುತ್ತಿದ್ದಾಳೆ.

5.ಜಾಹ್ನವಿ ಸಂಜೆ ಪೂಜೆಯನ್ನು ಮಾಡಿದಳು.

6.ಅಪ್ಪ ಮಗನಿಗೆ ಪತ್ರ ಬರೆದರು.

III. ಕೆಳಗಿನ ಪದಗಳನ್ನು ನಿನ್ನ ಸ್ವಂತ ವಾಕ್ಯದಲ್ಲಿ ಬಳಸು. (ಸಾಧಾರಣ)

7. ಟಿಕೆಟ್ ಕೌಂಟರ್ -

8. ಶಾಲೆ -

IV. ಮಾದರಿಯಂತೆ ಬರೆ. (ಸುಲಭ)

ಮಾದರಿ : ಕೇಳು -ಕೇಳುವರು- ಕೇಳುತ್ತಾರೆ

9. ಹೇಳು –

10.ಹೋಗು –

11.ಬೇಡು –

12.ಮಾಡು –

13.ನೋಡು -

V. ಆವರಣದಲ್ಲಿರುವ ಸುಳಿವುಗಳನ್ನು ಆಧರಿಸಿ ಕೆಳಗಿನ ವಾಕ್ಯಗಳನ್ನು ಯಾರು ಹೇಳಿರಬಹುದು? ಎಂಬುದನ್ನು ಊಹಿಸು. (ಸುಲಭ)

(ಶಿಕ್ಷಕ , ನಿರ್ವಾಹಕ, ದರ್ಜಿ,ರೈತ, ವೈದ್ಯ, ಹೂವಾಡಗಿತ್ತಿ, ವಾಹನ ಚಾಲಕ)

14.ನಿಮಗೆ ಎಷ್ಟು ದಿನಗಳಿಂದ ಜ್ವರವಿದೆ ?

15.ಗದ್ದೆಗೆ ಮಧ್ಯಾಹ್ನ ನೀರನ್ನು ಹಾಯಿಸಿ ಬಾ.

16. ಒಂದು ಮಾರು ಮಲ್ಲಿಗೆ ಹೂವಿಗೆ ನೂರು ರೂಪಾಯಿ.

17. ಈ ಪಾಠವನ್ನು ಓದಿ ಕಲಿತುಕೊಂಡು ಬನ್ನಿ.

18. ನಿನಗೆ ಸ್ಕರ್ಟ್ ಹೊಲೆಯಲು ಎರಡು ಮೀಟರ್ ಬಟ್ಟೆ ಬೇಕು.

19. ನೀವು ಎಲ್ಲಿಗೆ ಹೋಗುವಿರಿ ?ಟಿಕೆಟ್ ಪಡೆದುಕೊಳ್ಳಿ.

VI. ಕೆಳಗಿನ ವ್ಯಕ್ತಿಗಳ ನಡುವಿನ ಸಂಭಾಷಣೆಯನ್ನು ಊಹಿಸಿ ಬರೆ. (ಕಠಿಣ)

20. ರೈತ ಮತ್ತು ನೀನು

21.ವ್ಯಾಪಾರಿ ಮತ್ತು ಗ್ರಾಹಕ

22.ಶಿಕ್ಷಕ ಮತ್ತು ವಿದ್ಯಾರ್ಥಿ.

VII. ಕೆಳಗಿನ ಪದಗಳಿಗೆ ಎರಡೆರಡು ಸಮಾನಾರ್ಥಕ ಪದಗಳನ್ನು ಬರೆ. (ಸಾಧಾರಣ)

23.ಋಷಿ :

24. ಇಚ್ಛೆ:

25.ವ್ಯವಸ್ಥೆ:

26. ಆಯಾಸ :

VIII. ಕೆಳಗಿನ ಸ್ಥಳಗಳಲ್ಲಿ ಬಿತ್ತರಿಸಬಹುದಾದ ಎರಡರಿಂದ ಮೂರು ಸೂಚನೆಗಳನ್ನುಬರೆ. (ಸಾಧಾರಣ)

27.ಬಸ್ ನಿಲ್ದಾಣ -

28.ರೈಲ್ವೆ ನಿಲ್ದಾಣ -

IX. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು. (ಸುಲಭ)

29.ಏಕಶಿಲಾ ಗೊಮ್ಮಟಮೂರ್ತಿ ಎಲ್ಲಿದೆ ?

30.ಮಕ್ಕಳು ಎಷ್ಟನೆಯ ಭೋಗಿಯನ್ನು ಹತ್ತಿದರು.?

31.ಬಾಹುಬಲಿಯ ಅಣ್ಣ ಯಾರು?

32.ಬಸದಿ ಎಂದರೇನು?

X. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸು. (ಸಾಧಾರಣ)

33.ಬೆಳಗೊಳ ಬೆಟ್ಟದಲ್ಲಿ ಮಕ್ಕಳು ಏನೇನು ನೋಡಿದರು ?

34.ನೀನು ಮೈಸೂರು ಪ್ರವಾಸವನ್ನು ಕೈಗೊಂಡರೆ ನೋಡಬಹುದಾದ ಸ್ಥಳಗಳಾವುವು ?

XI. 35.ಕಳೆದ ಬೇಸಿಗೆ ರಜೆಯಲ್ಲಿ ನೀನು ಕೈಗೊಂಡ ಪ್ರವಾಸದ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆ.(ಕ)

ಘಟಕ 13: ಬಾವಿಯಲ್ಲಿ ಚಂದ್ರ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	10	10	38%
2.	ಗ್ರಹಿಕೆ	12	16	46%
3.	ಅಭಿವ್ಯಕ್ತಿ	3	6	11%
4.	ಪ್ರಶಂಸೆ	1	3	4%
ಒಟ್ಟು		26	35	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	14	17	54%
2.	ಸುಲಭ	9	9	38%
3.	ಕಠಿಣ	2	8	8%
ಒಟ್ಟು		26	35	100%

ಘಟಕ 13: ಬಾವಿಯಲ್ಲಿ ಚಂದ್ರ

ಕಲಿಕಾ ಫಲ 10 : ಓದಿರುವ ಸಾಹಿತ್ಯಗಳ ವಿಷಯವಸ್ತು,ಘಟನೆಗಳು, ಚಿತ್ರಗಳು, ಪಾತ್ರಗಳು, ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ ಪ್ರಶ್ನಿಸುತ್ತಾರೆ, ತಮ್ಮ ಅಭಿಪ್ರಾಯ ನೀಡುತ್ತಾರೆ, ತಮ್ಮ ಅಭಿಪ್ರಾಯಗಳಿಗೆ ತಾರ್ಕಿಕ ಸಮರ್ಥನೆ ನೀಡುತ್ತಾರೆ.

I.1. ಈ ಪದ್ಯವನ್ನು ಓದಿ ಶಿರೋನಾಮೆ ಬರೆ. (ಸಾ)

ಚಂದಿರನೇತಕೆ ಓಡುವನಮ್ಮ
ಮೋಡಕ್ಕೆ ಹೆದರಿಹನೇ,
ಬೆಳ್ಳಿಯ ಮೋಡದ ಅಲೆಗಳ
ಕಂಡು ಚಂದಿರ ಬೆದರಿಹನೆ

II.2. ಹೊಂದಿಸಿ ಬರೆ.(ಸು)

ಎ.ತಿಂಗಳು	ತಾಯಿ
ಬಿ.ರಭಸ	ಚಂದ್ರ
ಸಿ.ಆಗಸ	ವೇಗ
ಡಿ.ಅಮ್ಮ	ಆಕಾಶ

III. ವಿರುದ್ಧಾರ್ಥಕ ಪದ ಬರೆ.(ಸು)

3. ಹಗಲು ×

4. ಆಸೆ ×

5. ಬೆಳಕು ×

IV.ಈ ಕೆಳಗಿನ ಪದಕ್ಕೆ ಸರಿಯಾದ ಒತ್ತಕ್ಷರ ಬರೆದು ಪದ ಪೂರ್ಣಗೊಳಿಸಿ ಬರೆ. (ಸುಲಭ)

6. ಚಂದ -

7. ಹಗ -

8. ಅಯೋ -

V.ಒಗಟು ಬಿಡಿಸಿ ಬರೆ.(ಸಾಧಾರಣ)

9. ನೀರಿಲ್ಲದ ಕೆರೆಯಲ್ಲಿ ತಟ್ಟೆ ತೇಲಿ ಬರುತ್ತದೆ.

10. ನೀಲಿ ಸಾಗರದಲ್ಲಿ ಬೆಳ್ಳನೆ ಮೀನುಗಳು ನಾನ್ಯಾರು?

11. ಹಳ್ಳಿ ಗಡಿಯಾರ, ಒಳ್ಳೆ ಆಹಾರ ನಾನು ಯಾರು?

VI.12. ರಾತ್ರಿ ಚಂದ್ರನ ಬೆಳದಿಂಗಳಿರುವ ಪರಿಸರದ ಚಿತ್ರವನ್ನು ಬಿಡಿಸಿ, ಬಣ್ಣ ತುಂಬಿ. (ಕ)

VII. ವಾಕ್ಯಗಳನ್ನು ಸರಿಪಡಿಸಿ ಬರೆ.(ಸಾಧಾರಣ)

13.ಚಂದ್ರನ ಬಾವಿಲಿ ಕಂಡು ಬಿಂಬವ

14. ಕೊಕ್ಕೆಯ ಬಾವಿಯ ಬಿಗಿದು ಹಗ್ಗಕೆ

15. ನೋಡುತಲೆದ್ದ ಮೆಲ್ಲನೆ ಮನೆ ಕಡೆ

VIII. 16.ಈ ಪದ್ಯವನ್ನು ಪೂರ್ಣಗೊಳಿಸು.(ಸಾಧಾರಣ)

ಎಳೆತದ ರಭಸಕೆ ___________

_____________ ನೋಡುತಲೆದ್ದ

ತಂಗಿಗೆ ಆಗಸ _______________

___________ ನೋಡಲ್ಲಿ

IX. ಬಹುವಚನ ರೂಪ ಬರೆ.(ಸು)

17. ಕಲ್ಲು-

18. ತಂಗಿ -

19. ಮನೆ -

X.ಈ ಕೆಳಗಿನ ಪದಗಳಿಗೆ ಸ್ವಂತ ವಾಕ್ಯ ರಚಿಸು.(ಸಾಧಾರಣ)

20.ಇರುಳು -

21.ಬಾವಿ –

XI. ಒಂದು ವಾಕ್ಯದಲ್ಲಿ ಉತ್ತರ ಬರೆ. (ಸುಲಭ)

22. ಚಂದ್ರನ ಬಿಂಬವನ್ನು ಎಲ್ಲಿ ನೋಡಿದರು ?

23. ಹಗ್ಗ ಏನಾಯ್ತು ?

24. ನಮ್ಮಯ ದೇವರು ಯಾರು?

25. ಪುಟ್ಟುವಿನ ತಂಗಿಯ ಹೆಸರೇನು?

XII. ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆ.

26. ಪುಟ್ಟು ಏಕೆ ಚಂದ್ರನನ್ನು ಬದುಕಿಸಿದನು ಎಂಬುದನ್ನು ನಿನ್ನದೇ ಮಾತುಗಳಲ್ಲಿ ವಿವರಿಸಿ ಬರೆ. (ಕಠಿಣ)

ಘಟಕ 14: ಹುತಾತ್ಮ ಬಾಲಕ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	13	19	38%
2.	ಗ್ರಹಿಕೆ	18	20	53%
3.	ಅಭಿವ್ಯಕ್ತಿ	3	12	9%
4.	ಪ್ರಶಂಸೆ	-	-	-
ಒಟ್ಟು		34	51	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	9	9	26%
2.	ಸುಲಭ	22	30	65%
3.	ಕಠಿಣ	3	12	9%
ಒಟ್ಟು		34	51	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ 14: ಹುತಾತ್ಮ ಬಾಲಕ

ಕಲಿಕಾ ಫಲ 02: ಆಲಿಸಿದ ಸಾಹಿತ್ಯ ರಚನೆಗಳ ವಿಷಯ ವಸ್ತು, ಘಟನೆ, ಚಿತ್ರ, ಪಾತ್ರ, ಶಿರೋನಾಮೆ, ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ. ಪ್ರಶ್ನೆ ಕೇಳುತ್ತಾರೆ. ತನ್ನ ಅನಿಸಿಕೆಯನ್ನು ವ್ಯಕ್ತ ಮಾಡುತ್ತಾರೆ ಮತ್ತು ತನ್ನ ಮಾತಿಗೆ ತಾರ್ಕಿಕ ಕಾರಣ ನೀಡುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆ. (ಸುಲಭ)

1. ಈ ಘೋಷಣೆಯನ್ನು ಪೂರ್ಣಗೊಳಿಸು: 'ಜೈ ಜವಾನ್,________.

ಎ. ಜೈ ಭಾರತ್

ಬಿ. ಜೈ ಕಿಸಾನ್

ಸಿ. ಜೈ ಮಾತರಂ

ಡಿ. ಜೈ ಸ್ವರಾಜ್

2.ಈ ದಿನಾಂಕದಂದು ಗಾಂಧೀಜಿಯವರು ಬ್ರಿಟಿಷರಿಗೆ ಭಾರತವನ್ನು ಬಿಟ್ಟು ತೊಲಗಿ ಎಂದು ಎಚ್ಚರಿಕೆ ನೀಡಿದರು.

ಎ.1942 ಆಗಸ್ಟ್ 9

ಬಿ.1942 ಆಗಸ್ಟ್ 15

ಸಿ.1942 ಆಗಸ್ಟ್ 20

ಡಿ.1942 ಅಗಸ್ಟ್ 1

3. ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಘೋಷಣೆ ಇದು:

ಎ. ಕೈ ಕೆಸರಾದರೆ ಬಾಯಿ ಮೊಸರು.

ಬಿ. ಕಾಯಕವೇ ಕೈಲಾಸ.

ಸಿ. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ .

ಡಿ. ಆಸೆಯೇ ದುಃಖಕ್ಕೆ ಮೂಲ.

II.ಆವರಣದಲ್ಲಿ ನೀಡಿರುವ ಅಕ್ಷರ ಬಳಸಿ ಪದಗಳನ್ನು ಪೂರ್ಣಗೊಳಿಸು. (ಸುಲಭ)

[ಗ, ರ, ದೇ ,ಲ,ನ)

4.___ಶ

5. ಬಾ___ಕ

6. ಭಾ___ತ

7. ಜ__ರು

III.ರಾಷ್ಟ್ರೀಯ ಹಬ್ಬಗಳ ,ಪ್ರಮುಖ ದಿನಾಚರಣೆಗಳ ದಿನಾಂಕವನ್ನು ಕಾಲಾನುಕ್ರಮದಲ್ಲಿ ಜೋಡಿಸಿ ಬರೆ. (ಸಾಧಾರಣ)

8. ಸ್ವಾತಂತ್ರ್ಯ ದಿನಾಚರಣೆ ಆಗಸ್ಟ್ 15

9. ಗಾಂಧಿ ಜಯಂತಿ ಅಕ್ಟೋಬರ್ 2

10. ಶಿಕ್ಷಕರ ದಿನಾಚರಣೆ ಸೆಪ್ಟೆಂಬರ್ 5

11. ಗಣರಾಜ್ಯೋತ್ಸವ ಜನವರಿ 26

12. ಅಂಬೇಡ್ಕರ್ ಜಯಂತಿ ಏಪ್ರಿಲ್ 14

IV.ಶಾಲೆ + ಅನ್ನು =ಶಾಲೆಯನ್ನು, ಈ ಮಾದರಿಯಂತೆ 4 ಪದಗಳನ್ನು ರಚಿಸು. (ಸಾಧಾರಣ)

13. ______________

14. _______________

15._________________

16._________________

V.ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ. (ಸಾಧಾರಣ)

17. ಅಮ್ಮ –

18. ಸುಳಿವು –

19. ಮೃತ್ಯು-

20. ಕಸುಬು-

VI.ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

21. ನಮ್ಮ ದೇಶ ಯಾವುದು?(ಸುಲಭ)

22. ಭಾರತೀಯರು ಸ್ವಾತಂತ್ರ್ಯಕ್ಕಾಗಿ ಯಾರ ವಿರುದ್ಧ ಹೋರಾಟ ಮಾಡಿದರು?(ಸುಲಭ)

23 .ಗಾಂಧೀಜಿಯವರ ತತ್ವ ಯಾವುದು? (ಸಾಧಾರಣ)

24 .ಜನರು ಎಲ್ಲಿ ಸೇರಿದ್ದರು? (ಸಾಧಾರಣ)

25. ನಾರಾಯಣನ ಪೂರ್ಣ ಹೆಸರೇನು? (ಸಾಧಾರಣ)

26. ಸಾಮರಸ್ಯದ ಮಂತ್ರ ಯಾವುದು? (ಸಾಧಾರಣ)

27. ನಾರಾಯಣನು ಓದುತ್ತಿದ್ದ ಶಾಲೆಯ ಹೆಸರೇನು? (ಸಾಧಾರಣ)

VII. ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸು.(ಸಾಧಾರಣ)

28.ಬಾಲಕ ನಾರಾಯಣನ ಕುರಿತಾಗಿ ತಾಯಿಯ ದುಗುಡ ಏನಾಗಿತ್ತು?

29. ದುರ್ಗದ ಬಯಲಿನಲ್ಲಿ ಸೇರಿದ ಜನರು ಏನೆಂದು ಘೋಷಣೆಗಳನ್ನುಕೂಗಿದರು?

VIII. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಅಥವಾ ಐದು ವಾಕ್ಯದಲ್ಲಿ ಉತ್ತರಿಸಿ.(ಕಠಿಣ)

30. ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರವೇನು?

31. ನಿಮ್ಮ ಶಾಲೆಯಲ್ಲಿ ಆಚರಿಸುವ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ನಾಲ್ಕು ವಾಕ್ಯಗಳಲ್ಲಿ ವಿವರಿಸಿ .

32. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕರ್ನಾಟಕದ ಹೋರಾಟಗಾರರ ಹೆಸರುಗಳನ್ನು ಪಟ್ಟಿಮಾಡಿ.

IX.33. ಭಾರತದ ತ್ರಿವರ್ಣ ಧ್ವಜದ ಚಿತ್ರ ಬರೆದು ಬಣ್ಣ ಹಾಕಿ . (ಸಾಧಾರಣ)

X.34.ಕೊಟ್ಟಿರುವ ಚೌಕದಲ್ಲಿ ಸೈನಿಕನಿಗೆ ಸಂಬಂಧಪಟ್ಟ ಅನೇಕ ಪದಗಳು ಅಡಗಿ ಕುಳಿತಿವೆ, ಅಂತಹ ಪದಗಳನ್ನು ವೃತ್ತ ಹಾಕಿ, ಪಟ್ಟಿ ಮಾಡು. (ಸಾಧಾರಣ)

ಯೋ	ಧ	ಶ	ಲ	ದೇ	ತ್ರಾ
ಯು	ವ	ಹ	ಸ	ಶ	ಗ
ದ್ದ	ಹು	ತಾ	ತ್ಮ	ಪ್ರೇ	ಳ
ಕ	ಪ್ರಾ	ಣ	ಚ	ಮ	ಧ
ಝ	ಭ	ಷ	ಸ್ವ	ತಂ	ತ್ರ
ಈ	ಹೋ	ರಾ	ಟ	ಪ	ಡ
ಬ	ಲಿ	ದಾ	ನ	ಜ	ಡ

ಘಟಕ15: ದುಡಿಮೆಯ ಗರಿಮೆ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	11	15	39%
2.	ಗ್ರಹಿಕೆ	11	22	39%
3.	ಅಭಿವ್ಯಕ್ತಿ	5	15	18%
4.	ಪ್ರಶಂಸೆ	1	3	4%
ಒಟ್ಟು		28	55	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	17	22	61%
2.	ಸುಲಭ	6	18	21%
3.	ಕಠಿಣ	5	15	18%
ಒಟ್ಟು		28	55	100%

ಘಟಕ15: ದುಡಿಮೆಯ ಗರಿಮೆ

ಕಲಿಕಾ ಫಲ-1 ಇನ್ನೊಬ್ಬರು ಆಡುವ ಮಾತುಗಳನ್ನು ಧ್ಯಾನ ಪೂರ್ವಕವಾಗಿ ಆಲಿಸಿ ಪ್ರತಿಕ್ರಿಯೆ ನೀಡುತ್ತಾರೆ ಮತ್ತು ಪ್ರಶ್ನೆ ಕೇಳುತ್ತಾರೆ

I. ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆ. (ಸುಲಭ)



1. ಈ ಚಿತ್ರದಲ್ಲಿರುವ ವ್ಯಕ್ತಿಯ ವೃತ್ತಿಯ ಹೆಸರು-------

ಎ. ರೈತ.　　ಬಿ. ಅಗಸ

ಸಿ. ಶಿಕ್ಷಕಿ　　ಡಿ. ಬಡಗಿ

2. ಸಂತೋಷ ಪದದ ವಿರುದ್ಧ ಪದ--------

ಎ. ಸಂತಸ.　　ಬಿ. ಹರುಷ

ಸಿ. ದುಃಖ.　　ಡಿ. ಆನಂದ

3. 'ಮುದದಿಂದ' ಈ ಪದವನ್ನು ಬಿಡಿಸಿ ಬರೆದಾಗ------

ಎ. ಮುದ+ಯಿಂದ　　ಬಿ. ಮುದದ+ಇಂದ

ಸಿ. ಮುದ+ಇಂದ　　ಡಿ.ಮುದ+ದಿಂದ

4. ಬೆಳೆಯನು ಬೆಳೆಯಲು ನೆರವು ನೀಡುತ್ತೇನೆ. ಈ ವಾಕ್ಯದಲ್ಲಿ ಬರುವ 'ನೆರವು' ಪದದ ಅರ್ಥ

ಎ.ಕೆಲಸ　　ಬಿ.ಸಲಹೆ

ಸಿ.ಕಾಯಕ　　ಡಿ.ಸಹಾಯ

5. ನಾನು ಹೊಲದಲ್ಲಿ ದುಡಿದು ಬೆಳೆಯನ್ನು ಬೆಳೆಯುವವನು ,ಹಾಗಾದರೆ ನಾನು ಯಾರು?

ಎ. ಬೆಸ್ತ　　ಬಿ. ರೈತ

ಸಿ. ಕಾರ್ಮಿಕ　　ಡಿ. ವೈದ್ಯ

II. 6.ಕೆಳಗಿನ ಚಿತ್ರವನ್ನು ಗಮನಿಸಿ. ಈ ವೃತ್ತಿಯ ಬಗ್ಗೆ ಬರೆಯಿರಿ (ಕ)



III. 7.ಚಿತ್ರವನ್ನು ಗಮನಿಸಿ ದರ್ಜಿಯು ಬಳಸುವ ಪರಿಕರಗಳ ಹೆಸರನ್ನು ಪಟ್ಟಿಮಾಡು.
(ಸಾಧಾರಣ)



IV. 8. ಪದ್ಯ ಭಾಗವನ್ನು ಪೂರ್ಣಗೊಳಿಸು (ಸುಲಭ)

ಕಬ್ಬಿಣ ಕುಟ್ಟುತ---------------------

-----------------------ದಾತನಿಗೆ.

V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು. (ಸುಲಭ)

9. ಕಬ್ಬಿಣ ಕುಟ್ಟಿ ಯಾವ ಪರಿಕರವನ್ನು ಮಾಡುವನು?

10. ಕಮ್ಮಾರನು ಹಾ◌ಾರೆಯನ್ನು ಮುದದಿಂದ ಯಾರಿಗೆ ಕೊಡುವನು?

11.ನೊಗವನು ಯಾರು ಮಾಡುವರು?

12.ಬಡಗಿಯು ಯಾವ ಮರವನ್ನು ಹುಡುಕಿದನು?

13.ಭೂಮಿಯನ್ನು ಉಳುವ ಸಾಧನವನ್ನು ಏನೆಂದು ಕರೆಯುವರು?

14. ಬಟ್ಟೆಯ ಗಂಟನ್ನು ಯಾರ ಬೆನ್ನ ಮೇಲೆ ಇರಿಸುವನು?

15.ಎಲ್ಲರ ವಸನವನ್ನು ಒಗೆಯುವವರನ್ನು ಏನೆನ್ನುವರು?

16.ಬೆಸ್ತನು ಮೀನನ್ನು ಎಲ್ಲಿಗೆ ಸಾಗಿಸಿ ಮಾರುವನು?

17.ಮೀನನ್ನು ಮಾರಿ ಏನನ್ನು ಎಣಿಸುವನು?

18. ಉಡುಗೆಯನ್ನು ಹೊಲಿಯುವವನು ಯಾರು?

VI.ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿ. (ಸಾಧಾರಣ)

19. ಕಮ್ಮಾರನು ರೈತನಿಗೆ ಹೇಗೆ ನೆರವಾಗುವನು?

20. ಅಗಸ ಯಾವ ಬಗೆಯಲ್ಲಿ ವಸನವನ್ನು ಶುಚಿಗೊಳಿಸುವನು?

21. ಬೆಸ್ತನು ಮೀನು ಹಿಡಿದ ನಂತರ ಏನೇನು ಮಾಡುವನು?

22. ಬಟ್ಟೆ ಹೊಲಿಯುವವರು ಮೈಮನವನ್ನು ಹೇಗೆ ಬೆಳಗುವರು?

VII. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

23. ನೀನು ಯಾವ ವೃತ್ತಿಯನ್ನು ಪಡೆಯಲು ಬಯಸುವೆ? ಆ ವೃತ್ತಿಯ ಬಗ್ಗೆ ವಿವರಿಸು.

24. ದುಡಿಮೆಯ ಗರಿಮೆ ಪದ್ಯದ ಸಾರಾಂಶವನ್ನು ನಿನ್ನ ಮಾತುಗಳಲ್ಲಿ ಬರೆ.

25. ನಿಮ್ಮ ಅಪ್ಪ ಅಮ್ಮ ಮಾಡುತ್ತಿರುವ ವೃತ್ತಿಯ ಬಗ್ಗೆ ನಿನ್ನ ಮಾತುಗಳಲ್ಲಿ ಬರೆ.

26. ಟಿಕೆಟ್ ಪಡೆಯುವಾಗ ಬಸ್ಸಿನಲ್ಲಿ ನಡೆಯುವ ಕಂಡಕ್ಟರ್ ಮತ್ತು ಪ್ರಯಾಣಿಕರ ನಡುವಿನ ಸಂಭಾಷಣೆಯನ್ನು ಬರೆ.

VIII. 27. ಕೆಳಗಿನ ಚಿತ್ರಕ್ಕೆ ಸೂಕ್ತ ಬಣ್ಣವನ್ನು ಹಚ್ಚು. (ಸುಲಭ)



IX. 28. ಕೆಳಗಿನ ಚೌಕದಲ್ಲಿ ಶಿಕ್ಷಕ ವೃತ್ತಿಗೆ ಸಂಬಂಧಿಸಿದ ಅನೇಕ ಪದಗಳು ಅಡಗಿವೆ .ಅಂತಹ ಪದಗಳನ್ನು ಪತ್ತೆ ಹಚ್ಚಿ ಬರೆ. (ಸಾಧಾರಣ)

ಅ	ರ	ಶಾ	ಲೆ	ಗೈ
ಪು	ಸ್ತ	ಕ	ಯ	ರ
ಚ್	ಸಾ	ಮ	ಕ್ಕ	ಳು
ಕ	ಪ್ರ	ಹ	ಲ	ಗೆ
ಶಿ	ಸೀ	ಮೆ	ಸು	ಣ್ಣ
ಕ	ಸು	ಶಿ	ಕ್ಷ	ಕ
ಕು	ರ್ಚಿ	ಮೆ	ಲೆ	ಔ
ಡ	ಸ್ಟ	ರ್	ಕೊ	ಡ

ಘಟಕ16: ಕನಸುಗಾರ ಕಲಾಂ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	11	14	33%
2.	ಗ್ರಹಿಕೆ	15	25	46%
3.	ಅಭಿವ್ಯಕ್ತಿ	6	14	18%
4.	ಪ್ರಶಂಸೆ	1	4	3%
ಒಟ್ಟು		33	57	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	12	15	37%
2.	ಸುಲಭ	16	22	48%
3.	ಕಠಿಣ	5	20	15%
ಒಟ್ಟು		33	57	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ16: ಕನಸುಗಾರ ಕಲಾಂ

ಕಲಿಕಾ ಫಲ 11 : ತರ್ಕಾನುಸಾರವಾಗಿ ಬೇರೆ ಬೇರೆ ವಿಷಯಗಳು, ವ್ಯಕ್ತಿಗಳು ,ಕಲೆಗಳು ಮುಂತಾದವು ಉದಾಹರಣೆಗೆ ಗಣಿತ, ವಿಜ್ಞಾನ, ಸಾಮಾಜಿಕ ಅಧ್ಯಯನ, ನೃತ್ಯಕಲೆ, ಚಿಕಿತ್ಸೆ ಮುಂತಾದವುಗಳಲ್ಲಿ ಪ್ರಯೋಗಿಸಿರುವ ಶಬ್ದಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆ. (ಸುಲಭ)

1. ಪ್ರಯೋಗಾಲಯಕ್ಕೆ ಭೇಟಿ ನೀಡಿದವರು

ಎ. ಹೃದ್ರೋಗ ತಜ್ಞರು ಬಿ. ನರರೋಗ ತಜ್ಞರು

ಸಿ. ಮನರೋಗ ತಜ್ಞರು ಡಿ. ಮೂಳೆ ತಜ್ಞರು

2.ಇದನ್ನು ಕ್ಯಾಲಿಪರ್ ಎನ್ನುವರು

ಎ. ಕೈ ಕಾಲುಗಳಿಗೆ ಜೋಡಿಸುವ ಕೃತಕ ಸಾಧನ ಬಿ. ಕ್ಷಿಪಣಿಯ ಹಗುರವಾದ ವಸ್ತು

ಸಿ. ವಿಶೇಷ ಚೇತನರ ಗಾಲಿ ಕುರ್ಚಿ ಡಿ. ಕುರುಡರ ಲಿಪಿ

3.ಇದು ಅಬ್ದುಲ್ ಕಲಾಂ ಅವರ ಆತ್ಮಕಥನ

ಎ. ಹಾರುವ ಹಕ್ಕಿಗಳು ಬಿ. ಎರಡು ರೆಕ್ಕೆಗಳು

ಸಿ. ಅಗ್ನಿಯ ರೆಕ್ಕೆಗಳು. ಡಿ. ಕನಸಿನ ಹಕ್ಕಿಗಳು

4. 'ಕ್ಷಿಪಣಿಯ ಜನಕ' ಎಂದು ಕರೆಯಲ್ಪಡುವವರು.

ಎ. ಸುನಿತಾ ವಿಲಿಯಂ ಬಿ. ಕಲ್ಪನಾ ಚಾವ್ಲಾ

ಸಿ. ಅಬ್ದುಲ್ ಕಲಾಂ ಡಿ. ಚಾರ್ಲ್ಸ್ ಬ್ಯಾಬೇಜ್

II.5. ಕೆಳಗೆ ನೀಡಿರುವ ವೃತ್ತಿ ವಿಶೇಷ ಪದಗಳನ್ನು ಸೂಕ್ತ ವೃತ್ತಿಯೊಂದಿಗೆ ಹೊಂದಿಸು. (ಸುಲಭ)

ಎ. ಮಡಕೆ	ಬಡಗಿ
ಬಿ. ಬಿದಿರು	ಚಮ್ಮಾರ
ಸಿ. ಚರ್ಮ	ಮೇದರು
ಡಿ. ಮರ	ಕುಂಬಾರ

III.ವಿರುದ್ಧಾರ್ಥಕ ಪದಗಳನ್ನು ಬರೆ (ಸುಲಭ)

6. ಮಾನವೀಯತೆ ×

7. ಸಾಧ್ಯ×

8. ಜನನ×

IV.ಅನ್ಯ ಲಿಂಗ ಬರೆ (ಸುಲಭ)

9. ವೈದ್ಯ -

10 ಅಪ್ಪ-

11. ಹುಡುಗ-

12.ಕನಸುಗಾರ-

V.ಒಂದು ವಾಕ್ಯದಲ್ಲಿ ಉತ್ತರಿಸು. (ಸಾಧಾರಣ)

13. ಮೂಳೆ ತಜ್ಞರು ಎಲ್ಲಿಗೆ ಭೇಟಿ ನೀಡಿದರು?

14. ಕ್ಷಿಪಣಿಗಳನ್ನು ಎಂತಹ ವಸ್ತುಗಳಿಂದ ತಯಾರಿಸುತ್ತಾರೆ?

15. ನಿಜಾಮ ಆಸ್ಪತ್ರೆ ಎಲ್ಲಿದೆ?

16. ಕಾಲಿನ ನ್ಯೂನ್ಯತೆಗೆ ಒಳಗಾಗಿದ್ದ ಮಕ್ಕಳಿಗೆ ಎಷ್ಟು ಕಿಲೋ ಗ್ರಾಂ ಕ್ಯಾಲಿಪರ್ ಅಳವಡಿಸುತ್ತಿದ್ದರು?

17. ವಿಜ್ಞಾನಿಯು ಎಷ್ಟು ತೂಕದ ಕ್ಯಾಲಿಪರ್ ತಯಾರಿಸಿದರು ?

18. ಕಾಲಿನ ನ್ಯೂನತೆ ಉಳ್ಳ ರೋಗಿಗಳ ಕಾಲಿಗೆ ಏನನ್ನು ಅಳವಡಿಸಲಾಗುತ್ತದೆ ?

19. ಅಬ್ದುಲ್ ಕಲಾಂ ಎಲ್ಲಿ ಜನಿಸಿದರು ?

20. ಅಬ್ದುಲ್ ಕಲಾಂರವರ ತಂದೆ ತಾಯಿಯ ಹೆಸರೇನು?

21. ಅಬ್ದುಲ್ ಕಲಾಂ ರವರು ಭಾರತದ ಯಾವ ಹುದ್ದೆಯನ್ನು ಅಲಂಕರಿಸಿದ್ದರು ?

22. ನಮ್ಮ ದೇಶದ ಈಗಿನ ರಾಷ್ಟ್ರಪತಿ ಯಾರು ?

VI. ಎರಡು ವಾಕ್ಯಗಳಲ್ಲಿ ಉತ್ತರಿಸು :- (ಸಾಧಾರಣ)

23. ಲೋಹದ ಕ್ಯಾಲಿಪರ್ ನಿಂದ ವಿಕಲಚೇತನರು ಯಾವ ರೀತಿಯ ಕಷ್ಟಪಡುತ್ತಿದ್ದರು ?

24. ವೈದ್ಯರ ಹೃದಯ ತುಂಬಿ ಬಂದಿತು ಏಕೆ?

25. ವಿಜ್ಞಾನಿಯು ವೈದ್ಯರ ಸಮಸ್ಯೆಯನ್ನು ಯಾವ ರೀತಿ ಪರಿಹರಿಸಿದರು ?

26. ಕಲಾಂ ಬಾಲ್ಯದಲ್ಲಿ ಯಾವ ಕನಸನ್ನು ಕಾಣತ್ತಿದ್ದರು ?

27. ಅಬ್ದುಲ್ ಕಲಾಂ ವಿಜ್ಞಾನಿಯಾಗಿ ಯಾವ ಮಹತ್ವದ ಸಾಧನೆ ಮಾಡಿದ್ದಾರೆ ?

28. ಭಾರತ ಸರ್ಕಾರವು ಅಬ್ದುಲ್ ಕಲಾಂ ರವರಿಗೆ ನೀಡಿರುವ ಗೌರವ ಪ್ರಶಸ್ತಿಗಳು ಯಾವುವು ?

VII. ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

29.ವಿಶೇಷ ಚೇತನರಿಗೆ ನೀನು ಯಾವ ರೀತಿಯ ಸಹಾಯ ಮಾಡುವೆ?

30. ನೀನು ದೊಡ್ಡವನಾದ ಮೇಲೆ ಯಾವ ರೀತಿಯ ಸಮಾಜ ಸೇವೆಯನ್ನು ಮಾಡ ಬಯಸುವೆ ಎಂಬುದನ್ನು ನಿನ್ನ ಮಾತುಗಳಲ್ಲಿ ಬರೆ.

31. ಅಬ್ದುಲ್ ಕಲಾಂರವರು ಇಂದಿನ ಮಕ್ಕಳಿಗೆ ಕನಸು ಕಾಣಿರಿ ಎಂದು ಹೇಳುತ್ತಿದ್ದ ಮಾತನ್ನು ನೀನು ನಿನ್ನ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳುವೆ

32. ಕೆಳಗಿನ ಚಿತ್ರದಲ್ಲಿನ ಕಲಾ ಪ್ರಕಾರಗಳನ್ನು ಹೆಸರಿಸು.

	
	
	
	

33. ಶಾಲೆಯಲ್ಲಿ ಆಟವಾಡುವ ಸಮಯದಲ್ಲಿ ನಿನ್ನ ಗೆಳೆಯ ಅಥವಾ ಗೆಳತಿ ಬಿದ್ದು ಗಾಯಗೊಂಡರೆ ನೀನು ಮಾಡಬಹುದಾದ ಪ್ರಥಮ ಚಿಕಿತ್ಸೆ ಏನು ?

ಘಟಕ17: ಕಾಡಿನಲ್ಲೊಂದು ಸ್ಪರ್ಧೆ

ಉದ್ದಿಷ್ಟ ವಾರು ಅಂಕಗಳ ಹಂಚಿಕೆ:

ಕ್ರ.ಸಂ	ಉದ್ದಿಷ್ಟಗಳು	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅರಿವು	8	8	23%
2.	ಗ್ರಹಿಕೆ	17	20	49%
3.	ಅಭಿವ್ಯಕ್ತಿ	9	22	26%
4.	ಪ್ರಶಂಸೆ	1	2	3%
ಒಟ್ಟು		32	52	100%

ಕ್ರ.ಸಂ	ಪ್ರಶ್ನೆಯ ವಿಧ	ಪ್ರಶ್ನೆಗಳ ಸಂಖ್ಯೆ	ಅಂಕಗಳು	ಶೇಕಡಾ
1.	ಅತಿ ಸುಲಭ	17	17	49%
2.	ಸುಲಭ	13	22	37%
3.	ಕಠಿಣ	5	13	14%
ಒಟ್ಟು		32	52	100%

ಕಠಿಣತೆ ಮಟ್ಟ ಆಧಾರಿತ ಅಂಕಗಳ ಹಂಚಿಕೆ:

ಘಟಕ17: ಕಾಡಿನಲ್ಲೊಂದು ಸ್ಪರ್ಧೆ

ಕಲಿಕಾ ಫಲ 05: ವಿವಿಧ ಪ್ರಕಾರದ ವಿಷಯ ಸಾಮಗ್ರಿ (ಉದಾ : ಸಮಾಚಾರ ಪತ್ರಿಕೆಯ ಶಿರೋನಾಮೆ ಬಾಲ ಪತ್ರಿಕೆ ಮುಂತಾದವು)ಗಳಲ್ಲಿ ಬಂದಿರುವ ಪ್ರಾಕೃತಿಕ, ಸಾಮಾಜಿಕ ಮತ್ತು ಇತರೆ ಸಂವೇದನಾಶೀಲ ಅಂಶಗಳನ್ನು ತಿಳಿಯುವುದರೊಂದಿಗೆ ಅವುಗಳ ಬಗ್ಗೆ ಚರ್ಚಿಸುತ್ತಾರೆ. ಆಲಿಸಿದ ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥ ಮಾಡಿಕೊಂಡು ಕಾರ್ಯರೂಪಕ್ಕೆ ತರುತ್ತಾರೆ.

ಕಲಿಕಾ ಫಲ 4 ಭಾಷೆಯ ಸೂಕ್ಷ್ಮತೆಗಳನ್ನು ಗಮನದಲ್ಲಿಟ್ಟುಕೊಂಡು ಭಾಷೆಯ ನಿರ್ಮಾಣ ಮಾಡುತ್ತಾ ಮತ್ತು ಅದರ ಪ್ರಯೋಗ ಮಾಡುತ್ತಾರೆ.

I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು. (ಸುಲಭ)

1. ಕಾಡಿನ ರಾಜ ಯಾರು?

2. ಆಶುಭಾಷಣ ಸ್ಪರ್ಧೆ ಎಂದರೇನು?

3. ಆನೆಗೆ ಆಶುಭಾಷಣ ಸ್ಪರ್ಧೆಯಲ್ಲಿ ಬಂದ ವಿಷಯ ಯಾವುದು?

4. ಅತಿ ದುಬಾರಿ ಪ್ರಯಾಣದ ವಾಹನ ಯಾವುದು?

5. ರೇಡಿಯೋ ಕಂಡುಹಿಡಿದವರು ಯಾರು?

II. ಕೊಟ್ಟಿರುವ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ. (ಸುಲಭ)

6. ಆಚರಿಸೋಣ ಕಾಡಿನ ದಿನಾಚರಣೆಯನ್ನು

7. ನಿರ್ಭಯವಾಗಿ ಓಡಾಡುತ್ತಿದ್ದವು ಪ್ರಾಣಿಗಳೆಲ್ಲ

8. ವ್ಯವಹಾರ ಹಣದ ಬ್ಯಾಂಕಿನಲ್ಲಿ ಎಲ್ಲರೂ ಮಾಡುತ್ತೇವೆ

9. ಎತ್ತರವಾದ ಅತ್ಯಂತ ಪರ್ವತ ಹಿಮಾಲಯ

III.ಈ ಮಾತನ್ನು ಯಾರು ಯಾರಿಗೆ ಹೇಳಿದರು? (ಸಾಧಾರಣ)

10."ಆಶುಭಾಷಣ ಸ್ಪರ್ಧೆ!ಹಾಗೆಂದರೇನು?"

11."ಕರಡಿ ಮಹಾರಾಯರೇ ನಿಮ್ಮ ಸಮಯ ಮುಗಿಯಿತು."

12. "ಈ ಸ್ಪರ್ಧೆ ನಡೆಸಲು ಸಹಕರಿಸಿದವರಿಗೆಲ್ಲ ಧನ್ಯವಾದಗಳು."

IV.ಈ ಕೆಳಗಿನ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಬರೆಯಿರಿ. (ಸಾಧಾರಣ)

13. ಕಾಡಿನ ದಿನಾಚರಣೆಯನ್ನು ಆಚರಿಸೋಣ

14.ಆಶುಭಾಷಣ ಸ್ಪರ್ಧೆ ಎಂದರೇನು

15. ಅಬ್ಬಾ ನನಗೆ ಇಷ್ಟವಾದ ವಿಷಯ ಬಂದಿದೆ

16. ವಿಡಿಯೋದಲ್ಲಿ ಚಿಂತನ ಕೃಷಿ ಸಮಾಚಾರ ಪ್ರಸಾರವಾಗುತ್ತದೆ

17. ಓ ನರಿರಾಯ ನಿನಗೆ ಅಷ್ಟು ಗೊತ್ತಿಲ್ಲಾ

V.ಸ್ಪರ್ಧೆ+ಅಲ್ಲಿ=ಸ್ಪರ್ಧೆಯಲ್ಲಿ ಈ ಮಾದರಿಯಂತೆ ಕೆಳಗಿನವುಗಳನ್ನು ಕೂಡಿಸಿಬರೆ.(ಸುಲಭ)

18. ನದಿ+ಅಲ್ಲಿ=

19. ಮನೆ +ಅಲ್ಲಿ=

20. ಶಾಲೆ+ಅಲ್ಲಿ =

21. ಕೆರೆ +ಅಲ್ಲಿ =

VI.ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸ. (ಸಾಧಾರಣ)

22. ದಿನಾಚರಣೆ:

23. ಮನರಂಜನೆ:

24. ಹೊರಾಂಗಣ:

VII.ನಾನು ಯಾರು? ಯೋಚಿಸಿ ಬರೆ.(ಸುಲಭ)

25. ಒಂದು ಹಪ್ಪಳ ಊರಿಗೆಲ್ಲ ಊಟ.

26. ಒಂಟಿ ಕಾಲಿನ ಕುಂಟ ನಾನು ಯಾರು?

27. ಚಿಕ್ಕ ಬೆಟ್ಟದಲ್ಲಿ ಪುಟ್ಟ ಚಂದ್ರ ನಾನ್ಯಾರು?

VIII. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.

28. ಸಂಪರ್ಕ ಸಾಧನವಾದ ರೇಡಿಯೋದ ಉಪಯೋಗವನ್ನು ತಿಳಿಸಿ. (ಸಾಧಾರಣ)

29. ದಿನನಿತ್ಯ ಜೀವನದಲ್ಲಿ ಬ್ಯಾಂಕಿನ ಮಹತ್ವವನ್ನು ವಿವರಿಸಿ.(ಕ)

30. ಆಧುನಿಕ ಯುಗದಲ್ಲಿ ಡಿಜಿಟಲ್ ಸಾಧನವಾದ ಮೊಬೈಲ್ ಬಳಕೆಯ ಅನುಕೂಲ ಮತ್ತು ಅನಾನುಕೂಲಗಳನ್ನು ಬರೆಯಿರಿ. (ಸಾಧಾರಣ)

31. ರೈಲು ಪ್ರಯಾಣದ ಮಹತ್ವ ತಿಳಿಸಿ.(ಕಠಿಣ)

IX. ಈ ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರಿಸಿ. (ಕಠಿಣ)

32. ಹಿಮಾಲಯ ಪರ್ವತ ಶ್ರೇಣಿ ಕುರಿತು ಬರೆ.

33. ನಿನಗೆ ಇಷ್ಟವಾದ ಪ್ರಾಣಿಯ ಚಿತ್ರ ಬರೆದು ಅದರ ಕುರಿತು ನಿನ್ನ ಮಾತುಗಳಲ್ಲಿ ಬರೆ.

34.ಈ ಕೆಳಗಿನ ಚಿತ್ರ ಗಮನಿಸಿ ನಿನ್ನಮಾತುಗಳಲ್ಲಿ ಬರೆ.:

	
a) ಜಾತ್ರೆ	**b) ಶಾಲಾ ಕೈತೋಟ**

X. ಯೋಜನಾ ಕಾರ್ಯ: (ಸಾಧಾರಣ)

35. ಕಾಡಿನಲ್ಲೊಂದು ಸ್ಪರ್ಧೆ ಪಾಠದಲ್ಲಿ ಬಂದಿರುವ ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಕೋಶ ತಯಾರಿಸಿ.

ಮಾದರಿ ಉತ್ತರಗಳು:

ಘಟಕ 01: ಕನ್ನಡಮ್ಮನ ಹರಕೆ

I)

1. ಅ) ಕುವೆಂಪು
2. ಈ) ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ
3. ಆ) ಕುವೆಂಪು
4. ಈ) ಎಲ್ಲರೂ
5. ಆ) ಅಯೋಧ್ಯ
6. ಇ) ಸವಿಜೇನು
7. ಇ) ಕಲಿಯಾಗಿ

II)

8. ವಿರೋಧ
9. ಕೂಸು,ಮಗು
10. ವೀರ, ತಿಳಿ
11. ನಮ್ಮ
12. ಕಾಯಕವೇ ಕೈಲಾಸ ಎಂಬುದು ಇಹಪರ ಸಾಧನಕ್ಕೆ ದಾರಿದೀಪವಾಗಿದೆ.
13. ಅರ್ಧ ವಿರಾಮ

III) 14.

ಎ. ದುಡಿ	ಶ್ರಮಪಡು
ಬಿ. ಮಡಿ	ಮರಣ
ಸಿ. ಕಲಿ	ವೀರ
ಡಿ. ಸವಿ.	ರುಚಿ
ಇ. ಹೋರಾಡು	ಸೆಣಸು

IV)

15. ಇಟ್ಟಿಗೆ, ಸುಟ್ಟ, ಮಟ್ಟ, ಬೆಟ್ಟದಲ್ಲಿ
16. ಕ್ಷತ್ರೀಯ, ಕ್ಷಮೆ, ಕ್ಷಮೆಯಾಚನೆ, ಕ್ಷಮಯಾಧರಿತ್ರಿ
17. ಶ್ರೇಯಸ್ಸು, ಶ್ರೇಷ್ಠ, ಶ್ರೇಯಸ್ಕರ, ಶ್ರೇಣಿ
18. ಅನ್ನದಾತ, ಚಿನ್ನ, ಕನ್ನಡ, ಸೊನ್ನ,

V)

19. ತಾಯಿಯಪ್ಪುಗೆ

20. ಮರೆತೆಯಾದರೆ

21. ಹರಕೆಯಿದು

22. ಕನ್ನಡಮ್ಮನ

23. ಕಲಿಯಾಗಿ

VI)

24. ಅಪ್ಪುಗೆ
25. ಹಾಲು
26. ಹರಕೆ
27. ಹೋರಾಡು

VII)

28. ಕನ್ನಡದ ಕಂದ ಕನ್ನಡಮ್ಮನ ಹರಕೆಯನ್ನು ಮರೆಯಬಾರದು.
29. ಕನ್ನಡದ ಕಂದ ಕನ್ನಡವನ್ನು ಕಾಪಾಡಬೇಕು.
30. ತಾಯಿಯ ಅಪ್ಪುಗೆ ಬಲು ಸೊಗಸಾಗಿರುತ್ತದೆ.
31. ಗುರುವಿನ ನುಡಿ ಬಾಳಿಗೆ ಶ್ರೇಯಸ್ಸು ಆಗಿರುತ್ತದೆ.
32. ಕನ್ನಡ ಕಂದ ತಾಯ್ನುಡಿಗೆ ದುಡಿದು ಮಡಿಯಬೇಕು.

VIII)

33. ಗುರುವಿನಿಂದ ಕನ್ನಡ ನುಡಿಯನ್ನು ಕಲಿತು ಜೀವನದಲ್ಲಿ ಏಳಿಗೆ ಹೊಂದು , ಈ ನಿನ್ನ ತಾಯಿ ನುಡಿಯಾದ ಕನ್ನಡಕ್ಕೆ ಕೆಲಸ ಮಾಡು ,ಈ ನುಡಿಗಾಗಿಯೇ ಜೀವನ ತ್ಯಜಿಸು ಎಂದಿದ್ದಾರೆ .
34. ಹಳದಿ ಬಣ್ಣದ ಮಾವು
ಮಕ್ಕಳ ಇಷ್ಟದ ಚಾಕಲೇಟ್

ಕೆಂಪು ಬಣ್ಣ ಸೇಬು

ಕರಡಿ ಇಷ್ಟದ ಹಲಸಿನ ಹಣ್ಣು

ಬಡವರ ಸೇಬು ಸೀಬೆಹಣ್ಣು.

IX)

35.ರಾಷ್ಟ್ರಕವಿ ಕುವೆಂಪುರವರು ಕನ್ನಡ ನಾಡು , ಕನ್ನಡ ನುಡಿ ಹಾಗೂ ಈ ನಾಡಿಗೆ ನಾವು ಸಲ್ಲಿಸುವ ಸೇವೆ ಕುರಿತು ವಿವರಿಸಿದ್ದಾರೆ . ಎಂದೆಂದಿಗೂ ಕನ್ನಡಕ್ಕಾಗಿ ಹೋರಾಡು, ಕನ್ನಡವನ್ನು ರಕ್ಷಿಸು ಮತ್ತು ಕನ್ನಡಕ್ಕಾಗಿ ಕೆಲಸ ಮಾಡು ಎನ್ನುತ್ತಾರೆ. ತಾಯಿಯ ಜೋಗುಳದ ಹರಕೆಯಿದು, ಈ ಕನ್ನಡವನ್ನು ಮರೆಯದಿರು, ನೀನು ಮರೆತರೆ ತಾಯಿಯನ್ನು ಮರೆತಂತೆ ಎನ್ನುತ್ತಾರೆ .ಈ ನಮ್ಮ ಕನ್ನಡ ನಾಡು, ಕನ್ನಡ ನುಡಿ ತಾಯಿಯ ಹಾಲಿನಂತ ರುಚಿ, ಬಾಯಿಯಲ್ಲಿ ಕನ್ನಡ ನುಡಿ ನುಡಿದರೆ ಸವಿ ಜೇನು ಬಾಯಿಯಲ್ಲಿ ಇದಂತೆ . ಈ ನಮ್ಮ ನುಡಿ ತಾಯಿಯನ್ನು ಅಪ್ಪಿಕೊಂಡಾಗ ಎಷ್ಟು ಆನಂದ ಮಗುವಿಗೆ ಆಗುತ್ತದೆಯೋ ಅಷ್ಟೇ ಆನಂದ ಈ ಕನ್ನಡ ನುಡಿಯಲ್ಲಿದೆ ಎನ್ನುತ್ತಾರೆ. ಗುರುವಿನಿಂದ ಈ ನುಡಿಯನ್ನು ಕಲಿತು ಜೀವನದಲ್ಲಿ ಏಳಿಗೆ ಹೊಂದು, ಈ ನಿನ್ನ ತಾಯಿ ನುಡಿಯಾದ ಕನ್ನಡಕ್ಕೆ ಕೆಲಸ ಮಾಡು, ಈ ನುಡಿಗಾಗಿಯೇ ಜೀವನ ತ್ಯಜಿಸು ಎಂದಿದ್ದಾರೆ. ಕವಿ ದೀನತೆಯಿಂದ ಕನ್ನಡಮ್ಮನ ಹರಕೆಯನ್ನು ಮರೆಯದಿರು ಕಂದಾ , ಚಿನ್ನಾ ಎಂದು ಹೇಳುತ್ತಾರೆ. ಮರೆತೆಯಾದರೆ ನೀನು ಮರೆತಂತೆ ನನ್ನನ್ನು ಎನ್ನುತ್ತಾ ಎಂದೆಂದಿಗೂ ನೀ ಕನ್ನಡಕ್ಕಾಗಿ ವೀರನಾಗಿ ಹೋರಾಡು ಎಂದು ಈ ಪದ್ಯದಲ್ಲಿ ಓದುಗರಿಗೆ ಕವಿ ಕರೆ ನೀಡಿದ್ದಾರೆ.

X)

36. ದಮ್ಮಯ್ಯ ಕಂದಯ್ಯ

ಬೇಡುವನು ನಿನ್ನಾ;
ಕನ್ನಡಮ್ಮನ ಹರಕೆ,
ಮರೆಯದಿರು,ಚಿನ್ನಾ

ಘಟಕ 02: ಬುದ್ಧಿವಂತ ರಾಮಕೃಷ್ಣ

I)

1. (ಇ) ನಮ್ಮ ಶಾಲೆಯಲ್ಲಿ ಹುಡುಗರು ಇದ್ದಾರೆ

2. (ಅ) ಧನ

3. (ಇ) ಹಾರಿ

4. (ಆ) ಪಾಠ

5. (ಅ) ಬಾಲ ಮಂಗಳ

6. (ಅ) ಬಟ್ಟೆಗಳು

II)

7. ವಿದ್ಯಾಸಾಗರನು ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದಿದ್ದನು.

8. ವಿದ್ಯಾಸಾಗರನು ಸಂಸ್ಕೃತ ವಿಷಯದಲ್ಲಿ ಮಹಾಮೇಧಾವಿಯಾಗಿದ್ದನು.

9. ತೆನಾಲಿ ರಾಮಕೃಷ್ಣನನ್ನು ಕೃಷ್ಣದೇವರಾಯನು ಸನ್ಮಾನಿಸಿದನು.

10. ತೆನಾಲಿ ರಾಮಕೃಷ್ಣನು ಬಟ್ಟೆಯಲ್ಲಿ ಸುತ್ತಿದ ಕಟ್ಟೊಂದನ್ನು ಸಭೆಗೆ ತಂದಿದ್ದನ್ನು.

11. ತಿಲಕಾಷ್ಠ ಪದದ ಅರ್ಥ ಎಳ್ಳಿನ ಕಡ್ಡಿಗಳು.

12. ವಿದ್ಯೆ ವಿನಯವನ್ನು ಕಲಿಸುತ್ತದೆ ಬುದ್ಧಿ ವಿವೇಕವನ್ನು ಕಲಿಸುತ್ತದೆ.

III)

13. ತೆನಾಲಿ ರಾಮಕೃಷ್ಣನು ಕೃಷ್ಣದೇವರಾಯನ ಆಸ್ಥಾನಕ್ಕೆ ವಾದ ಮಾಡಲು ಬಂದಿದ್ದ ವಿದ್ಯಾಸಾಗರ ಪಂಡಿತನನ್ನು ಸೋಲಿಸಿ ಆಸ್ಥಾನದ ಗೌರವ ಮರ್ಯಾದಿಗಳನ್ನ ಹೆಚ್ಚಿಸಿದ್ದಕ್ಕಾಗಿ ಕೃಷ್ಣದೇವರಾಯನು ತೆನಾಲಿ ರಾಮಕೃಷ್ಣನನ್ನು ಸನ್ಮಾನಿಸಿದನು.

14. ಹೌದು, ಏಕೆಂದರೆ ತೆಲಾಲಿ ರಾಮಕೃಷ್ಣನು ಸಂದರ್ಭವೊಚಿತವಾಗಿ ಯೋಚಿಸಿ ಸನ್ನಿವೇಶವನ್ನು ತನ್ನ ಚಾಣಾಕ್ಷ ಬುದ್ಧಿಶಕ್ತಿಯಿಂದ ನಿಭಾಯಿಸಿ ಆಸ್ಥಾನದ ಗೌರವ ಮರ್ಯಾದಿಗಳನ್ನು ಕಾಪಾಡಿದ್ದಕ್ಕಾಗಿ ನಾನು ತೆನಾಲಿ ರಾಮಕೃಷ್ಣನ ಬುದ್ಧಿವಂತಿಕೆಯನ್ನು ಮೆಚ್ಚುವೆನು.

IV)

15. ಪಲಾಯನ : ನಾನು ರಸ್ತೆಯಲ್ಲಿ ಬರುವಾಗ ಹಾವನ್ನು ಕಂಡು ಆ ಸ್ಥಳದಿಂದ ಪಲಾಯನ ಮಾಡಿದೆನು.

16. ಅಪ್ಪಣೆ : ನಾನು ಶಿಕ್ಷಕರ ಅಪ್ಪಣೆ ಪಡೆದು ತರಗತಿಯಿಂದ ಹೊರ ಬಂದೆನು

V)

17. ಮಗು ತಯಾರಿಸಿರುವ ಬಿತ್ತಿ ಪತ್ರವನ್ನು ಆಧರಿಸಿ ಅಂಕಗಳನ್ನ ನೀಡಲಾಗುವುದು.

VI)

18. ಮಗು ಪೂರ್ಣಗೊಳಿಸಿರುವ ಕಥೆಯನ್ನು ಆಧರಿಸಿ ಅಂಕಗಳನ್ನು ನೀಡುವುದು.

19. ಮಗು ಬರೆದಿರುವ ಸಂಭಾಷಣೆಯನ್ನು ಆದರಿಸಿ ಅಂಕಗಳನ್ನು ನೀಡುವುದು.

20. ಮಗು ರಚಿಸಿರುವ ಪ್ರಶ್ನೆಗಳನ್ನು ಆಧರಿಸಿ ಅಂಕಗಳನ್ನು ನೀಡುವುದು.

ಘಟಕ 03: ವೀರಮಾತೆ ಜೀಜಾಬಾಯಿ

I)

1. ಮರಾಠ

2. ಔರಂಗಜೇಬ

II)

3. ಚಿಗುರು ಮೀಸೆಯ ವೀರ ಬಾಲಕ ನಮ್ರತೆಯಿಂದ ನುಡಿದನು

4. ಗೆಲುವು ಸಿಕ್ಕಿದಾಗ ಆಚರಿಸುವ ಸಂತೋಷ ಸಮಾರಂಭ

5. ವಿದ್ಯಾ+ ಅಭ್ಯಾಸ

6. ವೈಭವ: ಮೈಸೂರಿನ ದಸರಾ ವೈಭವದಿಂದ ನಡೆಯಿತು

III)

7. ಜೀಜಾಬಾಯಿ ತನ್ನ ಕನಸಿನೊಂದಿಗೆ ಪುಣೆಗೆ ಬಂದು ನೆಲೆಸಿದಳು

8. ಜೀಜಾಬಾಯಿ ಚಾಣಾಕ್ಷ ಹೆಣ್ಣು ಮಗಳಾಗಿದ್ದಳು.

9. ತಾಯಿ ಮಗನ ಸಂಭಾಷಣೆಯಲ್ಲಿ ತಾಯಿಯ ಪಾತ್ರವನ್ನು ಬೀಜ ಬಾಯಿ ಹಾಗೂ ಮಗನ ಪಾತ್ರವನ್ನು ಶಿವಾಜಿ ನಿರ್ವಹಿಸಿದ್ದರು

10. ಶಿವಾಜಿಯು ಪ್ರಬಲ ಮೊಗಲ ಸಾಮ್ರಾಟ ಔರಂಗಜೇಬನ ವಿರುದ್ಧ ಹೋರಾಡಿ ಜಯಗಳಿಸಿದನು

11. ಶಿವಾಜಿಯನ್ನು ಗುರುವಾದ ದಾದಾಜಿಕೊಂಡದೇವನಲ್ಲಿ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದರು

12. ಶಿವಾಜಿಗೆ ಪ್ರತಿನಿತ್ಯ ರಾಮಾಯಣ ಮಹಾಭಾರತ ಮುಂತಾದ ಪುರಾಣ ಪುಣ್ಯ ಕಥೆಗಳನ್ನು ಹೇಳುತ್ತಿದ್ದಳು

IV)

13. ಯಾರು: ಶಿವಾಜಿ

ಯಾರಿಗೆ: ಜೀಜಾಬಾಯಿ

14. ಯಾರು: ಜೀಜಾಬಾಯಿ

ಯಾರಿಗೆ: ಶಿವಾಜಿ

V)

15. ತಾಯಿ ಮಗನನ್ನು ಕರೆದು ಪಕ್ಕದಲ್ಲಿ ಕುಳಿತುಕೊಳ್ಳಲು ಹೇಳುತ್ತಾಳೆ ಆಗ ಮಗ ಅಮ್ಮ ನನ್ನನ್ನು ಕರೆಸಿದ ಕಾರಣವೇನು ನನ್ನಿಂದ ಏನಾಗಬೇಕು ಕೇಳು ತಾಯಿ ಎಂದು ಬಾಲಕ ತಾಯಿಗೆ ಹೇಳುತ್ತಾನೆ ಆಗ ತಾಯಿ ನಾನು ಕೇಳಿದ್ದನ್ನು ಕೊಡುವೆಯಾ ಮಗನೇ ಎಂದು ಅಭಿಮಾನದಿಂದ ಕೇಳಿದಾಗ ಈ ಮಾತನ್ನು ನುಡಿಯುತ್ತಾನೆ

16. ಕೊಂಡಾಣ ದುರ್ಗವು ಮೊಘಲರ ವಶದಲ್ಲಿ ಇರುತ್ತದೆ. ಅದನ್ನು ಗೆದ್ದು ಜಯ ಸಾಧಿಸಲಿ ಎಂಬುದು ತಾಯಿಯ ಉದ್ದೇಶವಾಗಿತ್ತು

17. ಝಾನ್ಸಿರಾಣಿ ಲಕ್ಷ್ಮಿಬಾಯಿ, ರಾಣಿ ಅಬ್ಬಕ್ಕ, ಕಿತ್ತೂರು ಚೆನ್ನಮ್ಮಮತ್ತು ಒನಕೆ ಓಬವ್ವ

18 ಶಿವಾಜಿಯು ಮೊಘಲ್ ಸಾಮ್ರಾಟ ಔರಂಗಜೇಬನ ವಿರುದ್ದ ಹೋರಾಡಿ ಜಯಗಳಿಸಿದನು. ಮಗನ ವಿಜಯೋತ್ಸಕ್ಕಾಗಿ ತಾಯಿ ಸಂತೋಷಪಟ್ಟಳು.

19. ನ್ಯಾಯ ನೀತಿ ಸ್ತ್ರೀಯರಲ್ಲಿ ಗೌರವ ಕಷ್ಟ ಸಹಿಷ್ಣುತೆ ಇತ್ಯಾದಿ ಗುಣಗಳನ್ನು ಚಿಕ್ಕಂದಿನಿಂದಲೇ ಮಗನಲ್ಲಿ ಬೆಳೆಸಿದಳು

20. ದಾದಾಜಿ ಕೊಂಡ ದೇವನು ಶಿವಾಜಿಗೆ ಕತ್ತಿ ವರಸೆ ಕುದುರೆ ಸವಾರಿ ಮುಂತಾದ ಯುದ್ದ ಕಲೆಗಳನ್ನು ಕಲಿಸಿದನು

21. ಶಿವಾಜಿಗೆ ವೀರ ಪುರುಷರ ಕಥೆಗಳನ್ನು ಕೇಳುವ ಸಾಹಸಿ ಕೆಲಸಗಳನ್ನು ಮಾಡುವ ಆದರ್ಶಗಳನ್ನು ಬಾಲ್ಯದಿಂದಲೇ ಜೀಜಾಬಾಯಿ ಮಗನಲ್ಲಿ ಬೆಳೆಸಿದಳು

22. ಶಿವಾಜಿ ತನ್ನ ತಾಯಿಯಿಂದ ಕಲಿತ ಮೌಲ್ಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಮರಾಠ ಸಾಮ್ರಾಜ್ಯದ ಉನ್ನತಿಗೆ ಕಾರಣನಾದನು ಔರಂಗಜೇಬನ ವಿರುದ್ದ ಹೋರಾಡಿ ಜಯಗಳಿಸಿದನು ಶಿವಾಜಿಯ ಪಟ್ಟಾಭಿಷೇಕವು ತಾಯಿಯ ಕನಸಿನಂತೆ ನೆರವೇರಿತು

23. ಜೀಜಾಬಾಯಿಯು ಷಹಾಜಿಯಿಂದ ಅನಿವಾರ್ಯವಾಗಿ ದೂರವಾದಾಗ ನೊಂದುಕೊಂಡಳು.ಎದೆಗುಂದದೆ ಸ್ವತಂತ್ರವಾಗಿ ಬದುಕಲು ಪ್ರಾರಂಭಿಸಿದಳು

VI.)

24. ಮಗುವಿನ ಉತ್ತರವನ್ನುಆಧರಿಸಿ ಅಂಕಗಳನ್ನು ನೀಡುವುದು.

ಪದ್ಯ 04: ಮಳೆ

I. 1. (ಇ) ಕಡ್ಡಿ

2. (ಇ) ಕುಸಿಯ ತೊಡಗಿತು

3. (ಇ) ಪಳಕಳ ಸೀತಾರಾಮ ಭಟ್ಟ

4. (ಅ) ಮೋಡ

II. 5. ಆವಿಯಾಯಿತು

6. ಮೇಲಕೇರಿತು

7. ಅಡ್ಡವಾಯಿತು

8. ಘಳಿಗೆಯೊಳಗೆ

9. ಮೋಡವೆಲ್ಲ

III.10. ಎ) ಆವಿಯಾಯಿತು

ಬಿ) ಅಡ್ಡವಾಯಿತು

ಸಿ) ಮೋಡ ಕವಿಯಿತು

ಡಿ) ಗುಡುಗು ಗುಡುಗಿತು

ಇ) ಕೆಳಗೆ ಸುರಿಯಿತು

IV.11. ಮೋಡ

12. ಗಗನ

13. ಆಕಾಶ

14. ಸಮುದ್ರ

15. ಭಾನು

V.16. ಜಲ, ಉದಕ
17. ಆಕಾಶ, ಗಗನ
18. ಭೂಮಿ, ಅವನಿ
19. ಸಮುದ್ರ, ಸಾಗರ

VI. 20. ನೆಲದ ಮೇಲೆ ಗುಡ್ಡ ಬೆಟ್ಟ ಅಡ್ಡವಾಯಿತು.
21. ಆವಿ ತಣಿದು ಭಾರವಾಗಿ ಕುಸಿಯತೊಡಗಿತು.

22. ಮುತ್ತಿನಂಥ ಮಳೆಯ ನೀರು ಕೆಳಗೆ ಸುರಿಯಿತು .

23. ಮೋಡ ಮೇಲೇರಿದಾಗ ತಂಪು ತಗುಲಿತು.

24. ಮಿಂಚು ಮಿಂಚಿದಾಗ ಜಗವು ಬೆಳಗಿತು.

25. ಕಡಲ ನೀರು ಆವಿಯಾಗಿ ನೆಲದ ಕಡೆಗೆ ಬೀಸಿ ಬಂದಿತು.

VII. 26. ಬಿಸಿಲ ಝಳಕೆ ಕಡಲ ನೀರು

ಆವಿಯಾಯಿತು

ಆವಿಯಾಗಿ ನೆಲದ ಕಡೆಗೆ

ಬೀಸಿ ಬಂದಿತು.

VIII. 27.
- ಛತ್ರಿ
- ಸ್ವೆಟರ್
- ಟೋಪಿ
- ಪ್ಲಾಸ್ಟಿಕ್ ಚಪ್ಪಲಿ
- ರೇನ್ ಕೋಟ್

28.
- ಕೆರೆ, ಹೊಳೆ ತುಂಬಿ ಹರಿಯುತ್ತವೆ, ಇದರಿಂದ ಬೆಳೆ ಹಾನಿಯಾಗುತ್ತದೆ.
- ದನಕರುಗಳನ್ನುಮೇಯಿಸಲು ತೊಂದರೆ ಆಗುತ್ತದೆ.
- ಶಾಲೆಗೆ ಹೋಗಲು ಕಷ್ಟವಾಗುತ್ತದೆ.
- ಮರಗಳು ಮುರಿದು ಬೀಳುತ್ತವೆ.
- ಮನೆಗೆ ನೀರು ನುಗ್ಗುತ್ತದೆ.
- ವಿದ್ಯುತ್ ಕಡಿತವಾಗುತ್ತದೆ.

29. ಮಳೆಯಿಂದ ಆಗುವ ಅನುಕೂಲಗಳು:
- ಬೆಳೆ ಬೆಳೆಯಲು ಅನುಕೂಲವಾಗುತ್ತದೆ.
- ಕೆರೆಗಳು, ಹೊಳೆಗಳು ತುಂಬುತ್ತವೆ.
- ನಮಗೆ ಕುಡಿಯುವ ನೀರು ಲಭ್ಯವಾಗುತ್ತದೆ.
- ಮಳೆಕೊಯ್ಲು ಅನುಸರಿಸಬಹುದು.

ಘಟಕ 05: ಅಜ್ಜಿಯ ತೋಟದಲ್ಲಿ ಒಂದು ದಿನ

I. ಅ).ಒಳಗೆ.

ಆ). ಮುಂದೆ.

ಇ). ದೂರ.

ಈ). ನಿರ್ಭಯ.

ಎ). ಅಂತ್ಯ.

II. 2. ಮಲೆನಾಡ ತಪ್ಪಲಿನಲ್ಲಿರುವ ಊರು ಕಣಬೂರು.

3. ಹಾವು ಸರಸರನೆ ಹರಿದು ಹೋಯಿತು.

4. ಬೆಟ್ಟಗುಡ್ಡ ಮರಗಳಿಂದ ಕೂಡಿರುವ ಪ್ರದೇಶಗಳಲ್ಲಿ ಮಳೆ ಹೆಚ್ಚಾಗಿ ಬೀಳುತ್ತದೆ.

5. ಅಜ್ಜಿ ಮಕ್ಕಳಿಗೆ ಹಣ್ಣಿನ ಗಿಡಗಳನ್ನುನೆಡಲು ಹೇಳಿದಳು.

6. ಅಜ್ಜಿಯ ತೋಟದಲ್ಲಿ ಬೆಳೆ ಬೆಳೆಯಲು ಸಾವಯುವ ಗೊಬ್ಬರವನ್ನು ಬಳಸುತ್ತಿದ್ದರು.

7. ಇಂಗು ಗುಂಡಿಗಳ ಮೂಲಕ ಅಂತರ್ಜಲವನ್ನು ಹೆಚ್ಚಿಸಲಾಗುತ್ತದೆ.

III. 8. ಅಜ್ಜಿ

ಮಕ್ಕಳಿಗೆ.

9. ಅಶ್ವಿನಿ

ಅಜ್ಜಿಗೆ.

IV. 10. ಸಾಮಾನ್ಯವಾಗಿ ತೋಟದ ಸುತ್ತಮುತ್ತ ಕಂಡುಬರುವ ಪ್ರಾಣಿಗಳೆಂದರೆ ಹಾವು, ಕಪ್ಪೆ, ಕೀಟ , ಮೊಲ, ಹಂದಿ, ಮುಂಗುಸಿ ಮುಂತಾದವುಗಳು.

11. ಬಳ್ಳಾರಿ ಜಿಲ್ಲೆಯಲ್ಲಿ ಬೆಳೆಯುವ ಬೆಳೆಗಳೆಂದರೆ ಜೋಳ, ಮೆಣಸು , ಶೇಂಗಾ, ತೊಗರಿ.

12. ಹಿಂದಿನ ಕಾಲದಲ್ಲಿಹೊಲ ಉಳಲು ಬಳಸುತ್ತಿದ್ದ ಸಾಧನಗಳೆಂದರೆ ನೇಗಿಲು, ಕುಂಟೆ, ಎತ್ತು, ಕೋಣ.

13. ಸಾವಯುವ ಗೊಬ್ಬರವನ್ನು ಎಲೆ, ಕಡ್ಡಿ, ಹಸಿ ಕಸ, ಎರೆ ಗೊಬ್ಬರ, ಹಟ್ಟಿಗೊಬ್ಬರ, ಕೋಳಿ ಗೊಬ್ಬರ , ಬಳಸಿ ತಯಾರಿಸುತ್ತಾರೆ.

14. ಮಣ್ಣಿನ ಗುಣ ಹಾಗೂ ಹವಮಾನಕ್ಕೆ ಅನುಗುಣವಾಗಿ ವಿಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ಬೆಳೆ ಬೆಳೆಯುತ್ತಾರೆ.

V. 15. ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

16. ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

17. ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

18. ಮಗು ರಚಿಸಿದ ಚಿತ್ರವನ್ನು ಆಧರಿಸಿ ಅಂಕ ನೀಡುವುದು.

19.ಸಿ. ಭೂಮಿಯನ್ನುಹಸನು ಮಾಡುವುದು.

ಇ. ಬಿತ್ತನೆ ಮಾಡುವುದು.

ಡಿ. ನೀರು ಹಾಯಿಸುವುದು.

ಬಿ. ಗೊಬ್ಬರ ಹಾಕುವುದು.

ಎ. ಬೆಳೆ ಕಟಾವು ಮಾಡುವುದು.

ಘಟಕ 06: ದೊಡ್ಡವರು ಯಾರು?

I.1. ಎ. ಪರ್ವತ

ಬಿ. ವಿಶ್ವ

ಸಿ. ವಿವಾಹ

ಡಿ. ಸಡಗರ

II.2. 3

3. ಸೂರ್ಯ

4. 15

5. ಬಲಿಷ್ಠವಾದ

6. ಬಾಲಮಂಗಳ

III.7. ಜಗತ್ತನ್ನು ಬೆಳಗುವ ಸೂರ್ಯ ಬಹಳ ದೊಡ್ಡವನು.

8. ನಮ್ಮ ಮಗಳಿಗೆ ಇಲಿರಾಯನೇ ತಕ್ಕವರ.

IV.9. ಕತ್ತಲು

10. ಕುಟುಂಬಗಳು

11. ಕುಂಬಳಕಾಯಿ

12. ನಾವು ದೊಡ್ಡವರನ್ನು ಗೌರವದಿಂದ ಕಾಣಬೇಕು.

13. ಹೆಚ್ಚು ,ಅಧಿಕ

V.14.ಆ ಸಂಸಾರದಲ್ಲಿ ಒಬ್ಬ ಮಗಳಿದ್ದಳು.

15. ಎಲ್ಲರೂ ಸೇರಿ ಮೋಡದ ಬಳಿಗೆ ಹೋದವು.

VII.16.ಇಲಿಗಳು ಮೊದಲು ಸೂರ್ಯನ ಬಳಿ ಹೋದವು.
17. ಜಗತ್ತನ್ನು ಬೆಳಗುವವನು ಸೂರ್ಯ.

18. ಮಗಳಿಗೆ ಇಲಿರಾಯನೇ ತಕ್ಕವರ ಎಂದು ಇಲಿಗಳು ತೀರ್ಮಾನಿಸಿದವು.

19. ತಂದೆ ತಾಯಿಗಳು ಮಗನ್ ಮಗಳಿಗೆ ತಕ್ಕ ವರನನ್ನು ಹುಡುಕಬೇಕೆಂದು ಯೋಚಿಸಿದವು.

IX.20. ತಂದೆ ಇಲಿಯು "ನಮ್ಮಲ್ಲೇ ವರನನ್ನು ಇಟ್ಟುಕೊಂಡು ಸುಮ್ಮನೆ ಪರದಾಡಿದೆವು" ಎಂದು ಹೇಳಿತು.

21. ಈ ವಾಕ್ಯವನ್ನು ಸೂರ್ಯ ತಂದೆ ತಾಯಿ ಇಲಿಗಳಿಗೆ ಹೇಳಿದನು.

22. ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

X 23. 1. ಪಗಡೆಯಾಟ

2. ವಾಲಿಬಾಲ್

3. ಹಾಕಿ

4. ಚದುರಂಗ

5. ಕಣ್ಣಾ ಮುಚ್ಚಾಲೆ

6. ಕೇರಂ

7. ಕ್ರಿಕೆಟ್

8. ಲಗೋರಿ

XI 24 ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

ಘಟಕ 07: ಬೀಸೋ ಕಲ್ಲಿನ ಪದ (ಪದ್ಯ)

I. 1.ಬೀಸೋ ಕಲ್ಲಿನ ಹಿಡಿಕೂಟದ ಹೆಸರು ಚಂದ್ರಮತಿ.

2. ರಾಗಿಯು ಮುಗಿದಾಗ ರಾಜಾನ್ನ ಹೆಚ್ಚುತ್ತದೆ.

3. ಪಲ್ಲಕ್ಕಿ ಮೇಲೆ ಮಗ ಬರಲಿ ಎಂದು ತಾಯಿ ಹೇಳಿದ್ದಾಳೆ.

4. ಬೀಸೋಕಲ್ಲಿಗೆ ಬೆಲ್ಲದಾರತಿಯನ್ನು ಬೆಳಗುವರು.

II. 5. ಎ)ಆರತಿ- ದೀಪ

ಬಿ).ಸಿಟ್ಟು- ಕೋಪ

ಸಿ). ಭಾಗ್ಯ- ಅದೃಷ್ಟ

ಡಿ). ಅಡಿಗಲ್ಲು- ಕೆಳಗಿನ ಕಲ್ಲು

ಇ). ಗೂಟ -ಮರದ ಹಿಡಿ

ಎಫ್). ಕೆಲಸ- ಕಾರ್ಯ

III. 6. ಬೆಲ್ಲದಾರತೀಯ

7.ಸರಸ್ವತಿಯೇ

8.ಜಲ್ಲಜಲಾನೇ

9.ಬಿಸೋಕಲ್ಲು

IV. 10. ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯನ್ನು ಜಲ್ಲಾಜಲ್ಲಾನೇ ಉದುರಿಸಮ್ಮ ನಿನಗೆ ಬೆಲ್ಲದ ಆರತಿಯನ್ನು ಬೆಳಗುವೆನು ಎಂದು ಪ್ರಾರ್ಥಿಸುವಳು.

11. ರಾಗಿಯು ಮುಗಿದು ರಾಜಾನ್ನ ಹೆಚ್ಚಾದಾಗ ಹಿಡಿದ ಕೆಲಸ ಮುಗಿದಾಗ ತಾಯಿ ತನ್ನ ಬಲದೊಳನ್ನು ಕೈಬೀಸಿ ಬಿಡುತಾ

V. 12. ಹೆಚ್ಯಾವು, ನಾನ್ಹಿಡಿದ, ಸಿಟ್ಯಾಕೆ, ಕುಕ್ಕೇಲಿ, ತಕ್ಕೊಂಡು, ಸರಸತಿಯೇ, ಬರುತ್ತೀನಿ, ಸೊಸಿ...

13. ನೆನೆ- ನೀರಿನಲ್ಲಿ ನೆನೆಸು ನೆನಪು

* ಮುಡಿ- ಕೂದಲು,ಹೂ ಮುಡಿಯುವುದು.

* ಮುಗಿ -ಮುಕ್ತಾಯ, ಕೈಮುಗಿ, ಮುಂದಾಗು.

14. ಕಲ್ಲಮ್ಮ, ಮೆಲ್ಲಮ್ಮ, ರಾಗಿಯ, ನಿನಗೆ, ಅಂದುಳ್ಳ, ಚಂದುಳ್ಳ, ಮೇಗಲ್ಲು, ರಾಜಾನ್ನ, ಹೆಚ್ಯಾವು,ಕೆಲಸ, ಸಿಟ್ಯಾಕೆ,ಕುಕ್ಕೇಲಿ,ತಕ್ಕೊಂಡು, ರಾತ್ರಿಗೆ, ಭಾಗ್ಯವು, ಬರಲಿ,ಪಲ್ಲಕ್ಕಿ, ಮನೆಗೆ,ಮಲ್ಲಿಗೆ, ಮುಡಿಯೋ .

15. ಕಾಫಿ,ಟೀ, ಪ್ಲೇಟ್, ಲೈಟ್, ಪೆನ್, ಪೆನ್ಸಿಲ್, ಪೇಪರ್, ಬುಕ್, ಟೇಬಲ್,

ಚೇರ್, ಸ್ಟವ್, ಗ್ಯಾಸ್, ಬಾಕ್ಸ್, ಸ್ಕೂಲ್, ಬಸ್, ಆಟೋ...ಇತ್ಯಾದಿ.

16. ಮಕ್ಕಳು ತಮ್ಮ ಹಿರಿಯರಿಂದ ಒಂದೊಂದು ಜೋಗಿ ಪದ, ಗೀಗಿ ಪದ, ಜೋಗುಳ ಹಾಡು, ಸೋಬಾನೆ ಹಾಡನ್ನು ಸಂಗ್ರಹಿಸಿ ಯೋಜನೆ ತಯಾರಿಸುವರು.

17. ಮಕ್ಕಳು ತಮಗೆ ಇಷ್ಟವಾದ ಪದ್ಯ ಭಾಗವನ್ನು ಬರೆದು,ಏಕೆ ಇಷ್ಟ ಎಂದು ಕಾರಣವನ್ನು ತಿಳಿಸುವರು.

18. ಕೆಲಸಕ್ಕೆ ಸಂಬಂಧಿಸಿದ ಕೆಲವು ಗಾದೆ ಮಾತುಗಳು..

* ಕೈ ಕೆಸರಾದರೆ ಬಾಯಿ ಮೊಸರು.

* ಮಾಡಿದ್ದುಣ್ಣೋ ಮಹಾರಾಯ

* ಕಾಯಕವೇ ಕೈಲಾಸ ಮನಸಿದ್ದರೆ ಮಾರ್ಗ

* ಕುಳಿತು ತುಕ್ಕು ಹಿಡಿಯುವುದಕ್ಕಿಂತ, ದುಡಿದು ಸವಿಯುವುದೇ ಲೇಸು

* ಮೊದಲು ಹಾಳಾಗಿ ದುಡಿ ನಂತರ ಅರಸಾಗಿ ಉಣ್ಣು

* ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು

VI 19. ಅಂದುಳ್ಳ ಅಡಿಗಲ್ಲು
ಚಂದುಳ್ಳ ಮೇಗಲ್ಲು
ಚಂದ್ರಮತಿಎಯೆಂಬ ಹಿಡಿಗೂಟ
ಹಿಡುಕೊಂಡು ತಂದೆ ತಾಯಿಗಳ ನೆನೆದೇನ.

ಘಟಕ 08: ತಾಯಿಗೊಂದು ಪತ್ರ

I. 1. ಗುಂಪು.

2. ಗಟ್ಟಿಯಾಗಿ ಕೂಗು,

II. 3. ಮಗು- ಮಕ್ಕಳು

4. ಪ್ರಾಣಿಗಳು– ಪ್ರಾಣಿ

5. ಕವಿ– ಕವಿಗಳು

6. ಗೆಳೆಯ – ಗೆಳೆಯರು

7.ಹಕ್ಕಿ-ಹಕ್ಕಿಗಳು

8. ಕೋತಿಗಳು- ಕೋತಿ

III. 9. ಬನ್ನಿ × ಹೋಗಿ

10. ಮೇಲೆ × ಕೆಳಗೆ

11. ಸಂತೋಷ × ದುಃಖ

12. ಮುಂದೆ × ಹಿಂದೆ

IV. 13. ಸಂತೋಷ: ನನ್ನ ಅಜ್ಜಿಯನ್ನು ನೋಡಿ ಸಂತೋಷವಾಯಿತು.
14.ಸಮಾಚಾರ: ನಾನು ಉತ್ತೀರ್ಣನಾದ ಸಮಾಚಾರ ಕೇಳಿ ಸಂತೋಷವಾಯಿತು
15. ತಂಡ: ಕ್ರಿಕೆಟ್ ತಂಡಗಳಲ್ಲಿ ಆಡುವ ಆಟ

IV 16) ಮಕ್ಕಳು ಮೃಗಾಲಯದಲ್ಲಿ ಆನೆ, ಸಿಂಹ, ಹುಲಿ, ಜಿಂಕೆ, ಚಿರತೆ, ಜಿರಾಫೆ, ಗೆಂಡಾಮೃಗ, ಸಿಂಹ ಮುಂತಾದ ಪ್ರಾಣಿಗಳನ್ನು ನೋಡಿದರು

17) ಮೃಗಾಲಯದಲ್ಲಿ ಕತ್ತು ಉದ್ದವಿದ ಪ್ರಾಣಿ ಜಿರಾಫೆ

18) ಮೃಗಾಲಯದಲ್ಲಿ ಇದ್ದ ಹಾವುಗಳನ್ನು ಬಂಡಿಪುರ ಕಾಡಿನಿಂದ ತಂದು ಇಟ್ಟಿದ್ದರು

19) ಆನೆಯ ಮೇಲಿನ ಅಂಬಾರಿಯಲ್ಲಿ ಚಾಮುಂಡೇಶ್ವರಿ ದೇವರ ಚಿತ್ರವಿತ್ತು

20)ಮೈಸೂರಿನ ಮೃಗಾಲಯದ ಹೆಸರು ಶ್ರೀ ಜಯಚಾಮರಾಜೇಂದ್ರ ಮೃಗಾಲಯ

V. 21) ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

22) ಮಗುವಿನ ಉತ್ತರವನ್ನು ಆಧರಿಸಿ ಅಂಕ ನೀಡುವುದು.

23) ಪತ್ರ ಬರೆಯುವಾಗ ಯಾರು ಯಾರಿಗೆ ಯಾವ ದಿನದಂದು ಯಾವ ವಿಷಯಕ್ಕಾಗಿ ಪತ್ರವನ್ನು ಯಾವ ಉದ್ದೇಶಕ್ಕೆ ಬರೆದಿದ್ದಾರೆ ಎಂಬ ಅಂಶವು ಮುಖ್ಯವಾಗಿರುತ್ತದೆ

V II. 24) ವಿದ್ಯಾರ್ಥಿಯು ಅಭಿವ್ಯಕ್ತಿಗೊಳಿಸಿರುವ ವಿಷಯವನಾದರಿಸಿ ಪ್ರಶ್ನೆಗೆ ಇರುವ ಮೂರು ಅಂಕಗಳನ್ನ ಆಧರಿಸಿ ಅಂಕವನ್ನು ನೀಡುವುದು

25) ವಿದ್ಯಾರ್ಥಿಯು ಪಾಲಕರಿಗೆ ಬರೆದಿರುವ ವಿಷಯ ಹಾಗೂ ಅಭಿವ್ಯಕ್ತಿಯ ಕಲೆಯನ್ನು ನೋಡಿ ಮೂರು ಅಂಕಗಳಿಗೆ ಕೊಡುವಬಹುದಾದಂತಹ ಅಂಕವನ್ನು ನಿರ್ಧರಿಸಿ ನೀಡುವುದು

26) ವಿದ್ಯಾರ್ಥಿಯ ಪ್ರಾಣಿಗಳ ಹೆಸರಿಗೆ ಚಿತ್ರಗಳನ್ನು ಹೊಂದಿಸಿರುವ ಕಲೆಯನ್ನು ನೋಡಿ ಅಂಕವನ್ನು ನೀಡುವುದು

27) ಮಕ್ಕಳು ತಮ್ಮದೇ ಆದ ವಾಕ್ಯಗಳಲ್ಲಿ ಉತ್ತರಿಸುವುದು

28) ಮಕ್ಕಳು ತಮ್ಮದೇ ಆದ ವಾಕ್ಯಗಳಲ್ಲಿ ಉತ್ತರಿಸುವುದು

ಘಟಕ 09 : ಮಹಿಳಾ ದಿನಾಚರಣೆ

I. 1. ಇ. ನಮಸ್ಕಾರ

2. ಆ. ಜೀವನ +ಅಲ್ಲಿ.

3. ಅ. ಸಾಹಿತ್ಯ.

4. ಈ. ನಗಣ್ಯ.

II. 5. ಎ)ಸಾವಿತ್ರಿಬಾಯಿ ಫುಲೆ---- ಶಿಕ್ಷಣ ಕ್ಷೇತ್ರ

ಬಿ). ವಿಜಯಲಕ್ಷ್ಮಿ ಪಂಡಿತ್---- ರಾಜಕೀಯ ಕ್ಷೇತ್ರ

ಸಿ). ಲತಾ ಮಂಗೇಶ್ಕರ್ -----ಸಂಗೀತ ಕ್ಷೇತ್ರ

ದಿ). ಸುನಿತಾ ವಿಲಿಯಮ್ಸ್ ------ಬಾಹ್ಯಾಕಾಶ

ಇ). ರಾಣಿ ಅಬ್ಬಕ್ಕ------- ಸ್ವಾತಂತ್ರ್ಯ ಹೋರಾಟ.

III .6. ನಿರೂಪಣೆ.

7. ಕಮಲ ಹಂಪನಾ.

8. ಮನೆ

9. ವಿಸ್ಮಯ.

IV.10. ದಿನಾಚರಣೆ.

11. ಕಾರ್ಯಕ್ರಮ.

12. ಬಾಹ್ಯಾಕಾಶ.

13. ಭಾವಚಿತ್ರ.

V. 14. ಹೂ ಮಾಲೆ.

15. ಭಾಷಣವನ್ನು

16. ಎಸ್. ಡಿ .ಎಂ. ಸಿ.

17. ಸಾಮಾಜಿಕ ಸೇವಾ.

VI. 18. ಮುಖ್ಯ ಶಿಕ್ಷಕರು ; ಮಕ್ಕಳಿಗೆ.

19. ಮಕ್ಕಳು ; ಶಿಕ್ಷಕಿಗೆ.

VII. 20,21,22, ಮಕ್ಕಳ ಉತ್ತರವನ್ನು ಪರಿಶೀಲಿಸಿ. ಅಂಕ ನೀಡುವುದು.

VIII. 23. ಮಾರ್ಚ್ ಎಂಟರಂದು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಣೆ ಮಾಡಲಾಗುತ್ತದೆ.

24. ಆಧುನಿಕ ಮಹಿಳೆಯರು ಕೆಲಸದಲ್ಲಿ ಸಮಾನ ಅವಕಾಶ ಪಡೆದುಕೊಂಡಿದ್ದಾರೆ.

25. ಎಂ .ಎಸ್. ಸುಬ್ಬಲಕ್ಷ್ಮಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ .

26. ಕಾರ್ಯಕ್ರಮ ರಾಷ್ಟ್ರಗೀತೆಯೊಂದಿಗೆ. ಮುಕ್ತಾಯವಾಯಿತು.

IX. 27. ಸ್ವಾಗತ.

28. ಕ್ರೀಡೆ.

29. ಸಹಾಯ /ನೆರವು

30. ಮುಂದೆ

X. 31. ಎ) ಪ್ರೀತಿ ×ದ್ವೇಷ

ಬಿ) ಗೌರವ × ಗೌರವ.

32.ಎ) ಅತಿಥಿ --ಅತಿಥಿಗಳು

ಬಿ)ಶಿಕ್ಷಕ-- ಶಿಕ್ಷಕರು

33. ಕಾರ್ಯ- ಕೆಲಸ, ಕಾಯಕ

34. ಎ)ಕ್ಷೇತ್ರದಲ್ಲಿ = ಕ್ಷೇತ್ರದ+ ಅಲ್ಲಿ

ಬಿ) ಭಾಷಣವನ್ನು = ಭಾಷಣ+ ಅನ್ನು

35. ಎ)ಶಿಕ್ಷಕ --ಶಿಕ್ಷಕಿ

ಬಿ)ಪುರುಷ --ಮಹಿಳೆ

XI. 36. ಮಹಿಳಾ ದಿನಾಚರಣೆ ಕಾರ್ಯಕ್ರಮದ ನಿರೂಪಣೆಯನ್ನು ಐದನೆಯ ತರಗತಿ ವಿದ್ಯಾರ್ಥಿ ಶೇಖರ್ ಮಾಡಿದನು.

37. ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾರ್ಥಿಸಿದವರು ನಾಲ್ಕನೇ ತರಗತಿ ವಿದ್ಯಾರ್ಥಿನಿಯರಾದ ಕುಸುಮ ಮತ್ತು ಮೇರಿ.

38. ಕಾರ್ಯಕ್ರಮದಲ್ಲಿ ಎಲ್ಲರನ್ನೂ ಸುಮತಿ ಸ್ವಾಗತಿಸಿದಳು.

39. ಮಾರ್ಚ್ ೮ ರ ವಿಶೇಷತೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ.

40. ಮಹಿಳಾ ದಿನಾಚರಣೆಯ ಮಹತ್ವದ ಕುರಿತು ಪ್ರಾರ್ಥಮಿಕ ನುಡಿಯನ್ನು ಮುಖ್ಯೋಪಾಧ್ಯಾಯರು ನುಡಿದರು.

41. ಮದರ್ ತೆರೇಸಾ ರವರು ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

42. ಪಿ.ವಿ .ಸಿಂಧೂರವರು ಸಾಧನೆ ಮಾಡಿರುವ ಕ್ಷೇತ್ರ ಕ್ರೀಡೆ.

43. ಕಾರ್ಯಕ್ರಮದಲ್ಲಿ ಫಾತಿಮಾ ಎಲ್ಲರನ್ನು ವಂದಿಸಿದರು.

XII. 44. ಮಹಿಳಾ ದಿನಾಚರಣೆಯು ಪ್ರತಿಯೊಬ್ಬರ ಜೀವನದಲ್ಲಿ ಮತ್ತು ಸಮಾಜದಲ್ಲಿ ಮಹಿಳೆಯರ ಬಗ್ಗೆ ಮೆಚ್ಚುಗೆ, ಗೌರವ ,ಪ್ರೀತಿ ಮತ್ತು ಕಾಳಜಿಯ ಸಂಕೇತವಾಗಿದೆ.

45. ಮಹಿಳೆಯರು ಸಾಹಿತ್ಯ, ಸಂಗೀತ ,ಕ್ರೀಡೆ ,ವಿಜ್ಞಾನ, ತಂತ್ರಜ್ಞಾನ ,ಬಾಹ್ಯಾಕಾಶ, ಶಿಕ್ಷಣ ,ರಾಜಕೀಯ, ಸ್ವಾತಂತ್ರ್ಯ ಹೋರಾಟ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ.

46. ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ,ಒನಕೆ ಓಬವ್ವ ,ಬೆಳವಡಿ ಮಲ್ಲಮ್ಮ, ರಾಣಿ ಅಬ್ಬಕ್ಕ ಮೊದಲಾದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು.

47. ಅಕ್ಕಮಹಾದೇವಿ, ಸಂಚಿಹೊನ್ನಮ್ಮ, ತಿರುಮಲಾಂಬ, ಎಂ.ಕೆ .ಇಂದಿರಾ ,ಅರುಂಧತಿ ರಾಯ್, ಕಮಲ ಹಂಪನಾ,ಸಾ.ರಾ. ಅಬೂಬಕರ್ ಮೊದಲಾದವರು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.

XIII. 49,50,51,52 ಮಕ್ಕಳ ಉತ್ತರವನ್ನು ಪರಿಶೀಲಿಸಿ ಅಂಕ ನೀಡುವುದು

....

ಘಟಕ 10 : ಸರ್ವಜ್ಞನ ತ್ರಿಪದಿಗಳು

I. 1. ಬಸವಣ್ಣ

II. 2. ಅ ಪಟ್ಟಿ ಬ ಪಟ್ಟಿ

A.ಬಸವಣ್ಣ	ಕೃತಿಗಳು	(D)
B.ಕನಕದಾಸ	ತ್ರಿಪದಿಗಳು	(c)
C.ಸರ್ವಜ್ಞ	ವಚನಗಳು	(A)
D.ಕುವೆಂಪು	ಕೀರ್ತನೆಗಳು	(B)

III. 3. ಪರ್ವತ :ಬೆಟ್ಟ:: ನುಡಿ:___ ಮಾತು

4. ಬಚ್ಚಿಡು :ಮುಚ್ಚಿಡು ::ಪರರು:______ ಬೇರೆಯವರು

IV 5. ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು <u>ಪರರಿಗೆ</u>

6. ಇರುವುದೊಂದೇ ಭೂಮಿ ಕುಡಿಯುವುದು ಒಂದೇ <u>ನೀರು</u>

V. 7.ಜಾತಿ × ವಿಜಾತಿ
8.ಮುಂದೆ × ಹಿಂದೆ

9.ಧರ್ಮ × ಅಧರ್ಮ

10.ಪಾಪ × ಪುಣ್ಯ

11.ಸುಖ × ದುಃಖ

VI. 12. ಮೂರು ಸಾಲುಗಳ ಪದ್ಯವನ್ನು ತ್ರಿಪದಿ ಎಂದು ಕರೆಯುತ್ತಾರೆ

13. ದೇವರನ್ನು ಒಲಿಸಿಕೊಂಡವನೇ ಜಾತ

14. ಜ್ಯೋತಿ ಹೀನವಲ್ಲ

15. ಕೊಟ್ಟಿದ್ದಕ್ಕೆ ಕೆಟ್ಟೆ ಎನ್ನ ಬಾರದು

16. ಸೂರ್ಯನಿಗೆ

VII. 17.ಬಿಟ್ಟ ಪದ್ಯದ ಭಾಗವನ್ನು ತುಂಬು

ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಂಗೆ

ಕೊಟ್ಟಿದ್ದು , ಕೆಟ್ಟಿತೆನ್ನಬೇಡ ಮುಂದಕ್ಕೆ|

ಹುಟ್ಟಿಹುದು ಬುತ್ತಿ ಸರ್ವಜ್ಞ

VIII.18. ಜಾತಿ ನನ್ನ ಮನೆಯ ಜ್ಯೋತಿತಾ ಹೀನವೇ

ಜಾತಿ ವಿಜಾತಿ ಎನ್ನಬೇಡ ದೇವನೊಲಿ

ದಾತನೇ ಜಾತ ಸರ್ವಜ್ಞ

19. ಎಲ್ಲರೂ ನಡೆಯುವುದು ಒಂದೇ ಭೂಮಿ ಕುಡಿಯುವುದು ಒಂದೇ ನೀರು ಎಲ್ಲರಿಗೂ ಇರುವ ನೊಬ್ಬನೆ ಸೂರ್ಯ ಆದ್ದರಿಂದ ಪ್ರಕೃತಿ ಎಲ್ಲರಿಗೂ ಒಂದೇ ಎಂದು ಸರ್ವಜ್ಞ ತನ್ನ ತ್ರಿಪದಿಯಲ್ಲಿ ಹೇಳಿದ್ದಾನೆ

20. ಭಿಕ್ಷೆಗೆ ಬಂದವರನ್ನು ಆಗ ಬಾ ಈಗ ಬಾ ಎನ್ನದೆ, ಬಂದಾಗಲೇ ಕರೆದು ಕೊಡುವುದನ್ನು ನಿಜವಾದ ಧರ್ಮ ಎಂದಿದ್ದಾರೆ

VIII. 21.ಶಾಲಾ ಕೊಠಡಿಯ ಕಸವನ್ನು ಗೂಡಿಸುತ್ತೇವೆ

ಕಸವನ್ನು ಕಸದ ಬುಟ್ಟಿಯಲ್ಲಿಯೇ ಹಾಕುತ್ತೇವೆ

ಕಪ್ಪು ಹಲಗೆಯನ್ನು ಸ್ವಚ್ಛಗೊಳಿಸುತ್ತೇವೆ

ಎಲ್ಲಂತರಲ್ಲಿ ಕಸ ಹರಡದಂತೆ ನೋಡಿಕೊಳ್ಳುತ್ತೇವೆ

2. ಪೆನ್ನು ಪುಸ್ತಕವನ್ನು ಕೇಳಿದರೆ ಕೊಡುವೆ

ಒಟ್ಟಿಗೆ ಸೇರಿ ಓದಲು ಸಹಾಯ ಮಾಡುತ್ತೇನೆ

ಶಿಕ್ಷಕರು ಹೇಳಿದ ಪಾಠವನ್ನು ಓದಿಸುತ್ತೇನೆ

3. ಎಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಲು ಮೇಲು ಕೀಳು ಎಂಬ ಅರಿವು ಬಾರದಿರಲು ಎಲ್ಲರನ್ನೂ ಸಮಾನರಾಗಿ ಕಾಣಲು

22,23 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

ಘಟಕ 11: ವೀರ ಅಭಿಮನ್ಯು

I.

1.ಚಕ್ರವ್ಯೂಹವನ್ನು ಭೇದಿಸುವುದು, ಕೃಷ್ಣ. ಅರ್ಜುನ ಮತ್ತು ಬಲರಾಮರಿಗೆ ಗೊತ್ತಿತ್ತು.

2.ಅಭಿಮನ್ಯು ಚಕ್ರವ್ಯೂಹವನ್ನು ಭೇದಿಸುವುದನ್ನು ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಕಲಿತಿದ್ದ.

3.ದ್ರೋಣಾಚಾರ್ಯರು ಹನ್ನೆರಡನೆಯ ದಿನ ಚಕ್ರವ್ಯೂಹವನ್ನು ರಚಿಸಿದ್ದರು.

4.ಚಕ್ರವ್ಯೂಹವನ್ನು ರಚಿಸಿದ್ದ ದಿನ ಕೃಷ್ಣಾರ್ಜುನರು ಸಂಶಪ್ತಕರೆಂಬ ರಾಕ್ಷಸರನ್ನು ಎದುರಿಸಲು ಹೋಗಿದ್ದರು.

II. ಬಿಟ್ಟ ಸ್ಥಳ ತುಂಬಿರಿ

5.ದ್ರೋಣಾಚಾರ್ಯ

6.ಶ್ರೀ ಕೃಷ್ಣ ಪರಮಾತ್ಮ

7.ಚಕ್ರವನ್ನು

8.ಸುಮಿತ್ರ

III. 9. ಕೆಳಗೆ ಕೊಟ್ಟಿರುವ ಲೇಖನ ಚಿಹ್ನೆಗಳನ್ನು ಹೊಂದಿಸಿ ಬರೆಯಿರಿ

ಎ) !

ಬಿ).

ಸಿ).“____”

ಡಿ).

ಇ).?

IV. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸು

10.ಈ ಪ್ರಶ್ನೆಯನ್ನು ಮಕ್ಕಳ ಸ್ವಂತ ಅಭಿವ್ಯಕ್ತಿಗೆ ಬಿಡಲಾಗಿದೆ ಆದರೆ ಪದಕ್ಕೆ ಸೂಕ್ತ ಅರ್ಥ ಬರುವಂತೆ ವಾಕ್ಯ ರಚನೆ ಮಾಡಬೇಕು

11.ಈ ಪ್ರಶ್ನೆಯನ್ನು ಮಕ್ಕಳ ಸ್ವಂತ ಅಭಿವ್ಯಕ್ತಿಗೆ ಬಿಡಲಾಗಿದೆ ಆದರೆ ಸೂಕ್ತ ಅರ್ಥ ಬರುವಂತೆ ವಾಕ್ಯ ರಚನೆ ಮಾಡಬೇಕು

V ಸರಿಯಾದ ಉತ್ತರ ಆರಿಸಿ ಬರೆಯಿರಿ

12.ಡಿ) ಎಲ್ಲವೂ

13ಸಿ) ಬೈತಲೆ

14.ಡಿ) 4

15.ಸಿ) ಒಂದು ಬಗೆಯ ಸೇನಾ ರಚನೆ

16.ಬಿ) ಅವರು + ಏಕೆ

17.ಎ) ಏಕಲವ್ಯ

VI. ಕೊಟ್ಟಿರುವ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರು ?

18.ಈ ಮಾತನ್ನು ಭೀಮನು ಹೇಳಿದನು

ಈ ಮಾತನ್ನು ಧರ್ಮರಾಯನಿಗೆ ಹೇಳಿದನು.

ಅಭಿಮನ್ಯು ವನ್ನು ಯುದ್ದಕ್ಕೆ ಕಳಿಸಲು ಒಪ್ಪದೇ ಇರುವಾಗ ಅವನನ್ನು ಒಪ್ಪಿಸಲು ಈ ಮಾತನ್ನು ಹೇಳಿದನು.

19.ಈ ಮಾತನ್ನು ಅಭಿಮನ್ಯು ಹೇಳಿದನು.

ಈ ಮಾತನ್ನು ಧರ್ಮರಾಯನಿಗೆ ಹೇಳಿದನು

ಯುದ್ದಕ್ಕೆ ಕಳಿಸುವಂತೆ ಧರ್ಮರಾಯನ ಮನವೊಲಿಸುವ ಸಲುವಾಗಿ ಈ ಮಾತನ್ನು ಹೇಳಿದನು.

VII 20.ಶ್ರೀ ಕೃಷ್ಣ ಪರಮಾತ್ಮನ ಕೃಪೆ ತಂದೆಯ ಶೌರ್ಯ ನಿನ್ನಲ್ಲಿರುವಾಗ ಸಂದೇಹದ ಮಾತೇ ಇಲ್ಲ ಜಯಶಾಲಿಯಾಗಿ ಬಾ ಮಗನೇ ಹೋಗಿ ಬಾ ನಿನಗೆ ಮಂಗಳವಾಗಲಿ ಎಂದು ಹರಸಿದಳು.

21. ರಣಹೇಡಿಗಳೇ ತಾಯಿಯ ಹಾಲುಂಡ ಯಾವುದೇ ಕ್ಷತ್ರಿಯ ಈ ಕೆಲಸ ಮಾಡಲಾರ ವೀರಾ ಾವೇಶದಿಂದ ಎದುರಿಸಿ ಹೋರಾಡಿ ಸತ್ತು ಸ್ವರ್ಗ ಸೇರುವುದನ್ನು ಬಿಟ್ಟು ನರಕದ ದಾರಿ ಹಿಡಿಯುತ್ತೀರಾ ನಿಮಗೆ ಧಿಕ್ಕಾರವಿರಲಿ ಎಂದು ಅಭಿಮನ್ಯು ವೀರಾವೇಶದಿಂದ ನುಡಿದನು.

VIII. ಕೆಳಗಿನ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸು.

22. ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

23. ವೀರ ಅಭಿಮನ್ಯು ಗದ್ಯ ಪಾಠದಲ್ಲಿ ಬರುವ ಪಾತ್ರಗಳು ಅಭಿಮನ್ಯು, ಧರ್ಮರಾಯ, ಭೀಮಸೇನ, ಸುಭದ್ರೆ, ಉತ್ತರೆ ಮತ್ತು ದುರ್ಯೋಧನ

24. ಯುದ್ದದಿಂದ ಜೀವಹಾನಿ ಉಂಟಾಗುತ್ತದೆ. ಪರಿಸರದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಇದರಿಂದ ಹಲವಾರು ರೋಗಗಳು ಬರುತ್ತವೆ. ಸಾವು ನೋವುಗಳ ಸಂಖ್ಯೆ ಹೆಚ್ಚಾಗುತ್ತವೆ. ದೇಶದ ಅಭಿವೃದ್ದಿಯು ಕುಂಠಿತವಾಗುತ್ತದೆ. ಆರ್ಥಿಕವಾಗಿ ನಷ್ಟ ಉಂಟಾಗಿ

ದೇಶಕ್ಕೆ ಬಡತನ ಬರುತ್ತದೆ. ನೆರೆಹೊರೆಯ ದೇಶಗಳ ಬಾಂಧವ್ಯಕ್ಕೆ ಧಕ್ಕೆ ಉಂಟಾಗುತ್ತದೆ. ಹೀಗೆ ಮಕ್ಕಳು ತಮಗೆ ತಿಳಿದಿರುವ ವಿಚಾರವನ್ನು ಅಭಿವ್ಯಕ್ತಿ ಪಡಿಸುವುದು.

25. "ಚಿಂತೆಯನ್ನು ಬಿಡಿ ಚಕ್ರವ್ಯೂಹವನ್ನು ನಾನು ಭೇದಿಸುತ್ತೇನೆ. ನನ್ನನ್ನು ಆಶೀರ್ವದಿಸಿ ಕಳಿಸಿಕೊಡಿ. ನನ್ನ ಸಾಮರ್ಥ್ಯದ ಮೇಲೆ ನಿಮಗೆ ಶಂಕೆಯೇ? ನನ್ನ ಮೈಯಲ್ಲಿ ಹರಿಯುತ್ತಿರುವುದು ಕ್ಷತ್ರಿಯ ವಂಶದ ರಕ್ತ. ನಾನು ಜಗದ್ವಿಖ್ಯಾತ ಅರ್ಜುನನ ಮಗ. ಚಕ್ರವ್ಯೂಹವನ್ನು ಭೇದಿಸುವ ವಿದ್ಯೆಯನ್ನು ನಾನು ತಾಯಿಯ ಗರ್ಭದಲ್ಲಿರುವಾಗಲೇ ಶ್ರೀ ಕೃಷ್ಣ ಪರಮಾತ್ಮನಿಂದ ಕೇಳಿ ತಿಳಿದುಕೊಂಡಿದ್ದೇನೆ. ನನ್ನನ್ನು ಹರಸಿ ಕಳಿಸಿಕೊಡಿ" ಎಂದು ವೀರಾವೇಶದ ಮಾತುಗಳನ್ನಾಡುತ್ತಾ ಧರ್ಮರಾಯನ ಮನವೊಲಿಸಿದನು.

26. ದ್ರೋಣ, ಕರ್ಣ ಹಾಗೂ ಇತರ ಕೌರವ ಸೇನೆ ಸೇರಿ ಅಭಿಮನ್ಯುವಿನ ವೀರಾವೇಶ ನೋಡಿ ಅವನನ್ನು ಮುಗಿಸಲು ತಂತ್ರವನ್ನು ಹೂಡುವರು. ವಿರಾವೇಶದಿಂದ ಹೋರಾಡುತ್ತಿರುವಾಗ ಹಿಂದಿನಿಂದ ಬಂದು ಅಭಿಮನ್ಯುವಿನ ಕೈಗಳನ್ನು ಕತ್ತರಿಸುವರು. ನಂತರ ಸೈಂದವರಾಜ ಕರ್ಣ, ಜಯದ್ರಥ ಎಲ್ಲರೂ ಸೇರಿ ಅವನ ಮೇಲೆ ಬೀಳುವರು. ಅಭಿಮನ್ಯು ರಥದ ಚಕ್ರವನ್ನು ಕೈಯಲ್ಲಿ ಹಿಡಿದು ತಿರುಗಿಸುತ್ತಾ ವೀರಾವೇಶದಿಂದ ಹೋರಾಡಿ ಮರಣ ಹೊಂದುವನು.

ಘಟಕ: 12 ಪ್ರವಾಸ ಹೋಗೋಣ

I. 1.

ಎ)ಹಂಪಿ ಕಲ್ಲಿನ ರಥ

ಬಿ) ಶ್ರವಣಬೆಳಗೊಳ ಗೊಮ್ಮಟೇಶ್ವರ ವಿಗ್ರಹ

ಸಿ)ವಿಜಯಪುರ ಗೋಲ್ ಗುಂಬಜ್

ಡಿ)ಬೆಂಗಳೂರು ವಿಧಾನಸೌಧ

II.

2.ವಿಧಾನ ಸೌದ ಎಲ್ಲಿದೆ?

3. ವಿಮಾನಗಳು ಎಲ್ಲಿ ಹಾರಾಡುತ್ತವೆ?

4 .ಮೇರಿ ಹೇಗೆ ಓದುತ್ತಿದ್ದಾಳೆ?

5. ಜಾಹ್ನವಿ ಯಾವಾಗ ಪೂಜೆಯನ್ನು ಮಾಡಿದಳು?

6. ಅಪ್ಪ ಯಾರಿಗೆ ಪತ್ರ ಬರೆದರು?

III.

7,8 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

IV.

9. ಹೇಳು - -ಹೇಳುವರು- ಹೇಳುತ್ತಾರೆ.

10.ಹೋಗು - -ಹೋಗುವರು- ಹೋಗಿತ್ತಾರೆ.

11. ಬೇಡು –ಬೇಡುವರು-ಬೇಡುತ್ತಾರೆ

12. ಮಾಡು-ಮಾಡುವರು-ಮಾಡುತ್ತಾರೆ

13. ನೋಡು -ನೋಡುವರು- ನೋಡುತ್ತಾರೆ.

V.

14.ನಿಮಗೆ ಎಷ್ಟು ದಿನಗಳಿಂದ ಜ್ವರವಿದೆ.-ವೈದ್ಯ

15.ಗದ್ದೆಗೆ ಮಧ್ಯಾಹ್ನ ನೀರನ್ನು ಹಾಯಿಸಿ ಬಾ.-ರೈತ

16. ಮಾರಿಗೆ ನೂರು ರೂಪಾಯಿ.-ಹೂವಾಡಗಿತ್ತಿ

17. ಈ ಪಾಠವನ್ನು ಓದಿ ಕಲಿತುಕೊಂಡು ಬನ್ನಿ.-ಶಿಕ್ಷಕ

18. ನಿನಗೆ ಸ್ಕರ್ಟ್ ಹೊಳೆಯಲು ಎರಡು ಮೀಟರ್ ಬಟ್ಟೆ ಬೇಕು.-ದರ್ಜಿ

19. ನೀವು ಎಲ್ಲಿಗೆ ಹೋಗುವಿರಿ ಟಿಕೆಟ್ ಪಡೆದುಕೊಳ್ಳಿ.ನಿರ್ವಾಹಕ

VI. 20,21,22 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

VII.

23. ಖುಷಿ- ಸಂತೋಷ, ಹಿಗ್ಗು

24. ಇಚ್ಛೆ - ಅಪೇಕ್ಷೆ, ಆಸೆ

25. ವ್ಯವಸ್ಥೆ-ಏರ್ಪಾಡು, ಸಜ್ಜು

26.ಆಯಾಸ-ಬಳಲಿಗೆ,ಶ್ರಮ

VIII.

27.ಬಸ್ ನಿಲ್ದಾಣ :

1.ನಿಮ್ಮ ಎಲ್ಲಾ ಬೆಲೆಬಾಳುವ ವಸ್ತುಗಳು ಮತ್ತು ಸಾಮಾನುಗಳನ್ನು ಸುರಕ್ಷಿತವಾಗಿರಿಸಿಕೊಳ್ಳಿ

2. ಜೇಬುಗಳ್ಳರಿದ್ದಾರೆ ಎಚ್ಚರವಾಗಿರಿ.

3.ಆಗಾಗ್ಗೆ ಸ್ಯಾನಿಟೈಸರ್ ಬಳಸಿ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಿ.

4.ಅಪರಿಚಿತರು ನೀಡುವ ಯಾವುದೇ ಆಹಾರವನ್ನು ಸೇವಿಸಬೇಡಿ.

5.ದಯವಿಟ್ಟು ನಿಮ್ಮೆಲ್ಲರ ಗಮನ ಸೆಳೆಯಲು ನಾನು ಬಯಸುತ್ತೇನೆ, ಶುಭೋದಯ. ಹಾಸನ ಬಸ್ಸಿನ ಆವರಣಕ್ಕೆ ನಿಮ್ಮೆಲ್ಲರಿಗೂ ಸ್ವಾಗತ. ಪ್ರಿಯ ಪ್ರಯಾಣಿಕರೆ, ಮಂಗಳೂರು ಉಡುಪಿ ಬಸ್ ಸಂಖ್ಯೆ 1233 ಪ್ಲಾಟ್‌ಫಾರ್ಮ್ ಸಂಖ್ಯೆ 5 ರಲ್ಲಿ ಬರುತ್ತಿದೆ. ಎಲ್ಲಾ ಪ್ರಯಾಣಿಕರು ಎಲ್ಲಾ ಸುರಕ್ಷತಾ ನಿಯಮಗಳನ್ನು ಪಾಲಿಸುವಂತೆ ವಿನಂತಿಸಲಾಗಿದೆ?

28.ರೈಲ್ವೆ ನಿಲ್ದಾಣ:

1.ಎಂಜಿನ್ ಸಂಖ್ಯೆ 1122ರ ರೈಲುಗಾಡಿಯು ಸಂಜೆ 5:00 ಗಂಟೆಗೆ ಬದಲಾಗಿ 6:00 ಗಂಟೆಗೆ ಬಂದು ತಲುಪುತ್ತದೆ . ಕೆಲವು ಸಮಸ್ಯೆಗಳಿಂದಾಗಿ ಅನಾನುಕೂಲತೆಗಾಗಿ ಕ್ಷಮಿಸಿ.

2. ಎಂಜಿನ್ ಸಂಖ್ಯೆ 3325 ರೈಲುಗಾಡಿಯು ಶೀಘ್ರದಲ್ಲೇ ಪ್ಲಾಟ್‌ಫಾರ್ಮ್ ಸಂಖ್ಯೆ 2 ರಲ್ಲಿ ಬರಲಿದೆ.

3. ಎಂಜಿನ್ ಸಂಖ್ಯೆ 3344 ರೈಲುಗಾಡಿಯು ಪ್ಲಾಟ್‌ಫಾರ್ಮ್ ಸಂಖ್ಯೆ 2 ಕ್ಕೆ ಆಗಮಿಸುತ್ತಿದೆ ಪ್ರಯಾಣಿಕರು ಹಳದಿ ರೇಖೆಯ ಹಿಂದೆ ಉಳಿಯಲು ವಿನಂತಿಸಲಾಗಿದೆ.

4.ದಯವಿಟ್ಟು ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ.

5.ಪ್ರಯಾಣಿಕರು ರೈಲು ಹತ್ತುವ ಮೊದಲು ಟಿಕೆಟ್‌ಗಳನ್ನು ಖರೀದಿಸಲು ವಿನಂತಿಸಲಾಗಿದೆ.

IX.

29. ಮಕ್ಕಳೆಲ್ಲ ಶ್ರವಣಬೆಳಗೊಳಕ್ಕೆ ಪ್ರವಾಸ ಹೋಗಲು ಸಿದ್ದರಾಗಿದ್ದರು.

30. ರೈಲು ಬಂದು ನಿಲ್ಲಲು ಮತ್ತು ಹೊರಡಲು ನಿಗದಿಪಡಿಸಿರುವ ಜಾಗ.

31. ಭರತ ಚಕ್ರವರ್ತಿ ಬಾಹುಬಲಿಯ ಅಣ್ಣ.

32. ಜೈನ ದೇವಾಲಯವನ್ನು ಬಸದಿ ಎನ್ನುತ್ತೇವೆ.

X.

28. ಬೆಳಗೊಳ ಬೆಟ್ಟದಲ್ಲಿ ಮಕ್ಕಳು ಭರತ, ಬಾಹುಬಲಿ ಮತ್ತು ಇತರೆ ತಿರ್ಥಂಕರರ ಮೂರ್ತಿಗಳು ಮತ್ತು ಬಸದಿಗಳನ್ನು ನೋಡಿದರು.

29. ಅರಮನೆ ಮೃಗಾಲಯ ಚಾಮುಂಡಿ ಬೆಟ್ಟ ಕೆಆರ್‌ಎಸ್ ಡ್ಯಾಮ್ ವಸ್ತು ಸಂಗ್ರಹಾಲಯ ಮುಂತಾದ ಸ್ಥಳಗಳನ್ನು ವೀಕ್ಷಿಸಬಹುದು.

XI.

35. ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

ಘಟಕ 13: ಬಾವಿಯಲ್ಲಿ ಚಂದ್ರ

I. 1 ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟದ್ದು

II. 2. ಎ)ಚಂದ್ರ

ಬಿ)ವೇಗ

ಸಿ)ಆಕಾಶ

ಡಿ)ತಾಯಿ

III. 3.ಇರುಳು

4. ನಿರಾಸೆ

5. ಕತ್ತಲೆ

VI. 6. ಚಂದ್ರ

7. ಹಗ್ಗ

8. ಅಯ್ಯೋ

V. 9. ಚಂದ್ರ

10. ನಕ್ಷತ್ರ

11.ಕೋಳಿ

VI. 12. ವಿದ್ಯಾರ್ಥಿಗಳು ಚಿತ್ರ ಬಿಡಿಸಿ ಬಣ್ಣ ಹಾಕಿರುವುದನ್ನು ನೋಡಿ ಅಂಕ ನೀಡುವುದು.

VII. 13. ಬಾವಿಯಲ್ಲಿ ಚಂದ್ರನ ಬಿಂಬವ ಕಂಡು.

14. ಬಾವಿಯ ಹಗ್ಗಕೆ ಕೊಕ್ಕೆಯ ಬಿಗಿದು

15. ಮೆಲ್ಲನೆ ಮನೆಕಡೆ ನೋಡುತ ಎದ್ದ.

VIII. 16. ಎಳೆತದ ರಭಸಕೆ ಪುಟ್ಟುವು ಬಿದ್ದ

ಮೆಲ್ಲನೆ ಮನೆ ಕಡೆ ನೋಡುತಲೆದ್ದ

ತಂಗಿಗೆ ಆಗಸ ತೋರುತ್ತಲೆಂದ

"ಗೋಪಿ ನೋಡಲ್ಲಿ!"

IX. 17.ಕಲ್ಲುಗಳು

18.ತಂಗಿಯಂದಿರು

19. ಮನೆಗಳು

X. 20. 21 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

XI. 22.ಚಂದ್ರನ ಬಿಂಬವನ್ನು ಬಾವಿಯಲ್ಲಿ ನೋಡಿದರು

23. ಹಗ್ಗವತುಂಡಾಯ್ತು

24. ನಮ್ಮಯ ದೇವರು ಚಂದ್ರ

25. ಪುಟ್ಟುವಿನ ತಂಗಿಯ ಹೆಸರು ಗೋಪಿ

XII. 26. ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

ಘಟಕ 14: ಹುತಾತ್ಮ ಬಾಲಕ

I. 1. ಜೈ ಕಿಸಾನ್
2. 1942 ಆಗಸ್ಟ 9
3. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ

II. 4.ದೇಶ
5. ಬಾಲಕ
6. ಭಾರತ
7. ಜನರು

III. 8. ಗಣರಾಜ್ಯೋತ್ಸವ ಜನವರಿ 26

9. ಅಂಬೇಡ್ಕರ್ ಜಯಂತಿ ಏಪ್ರಿಲ್ 14

10. ಸ್ವಾತಂತ್ರ್ಯ ದಿನಾಚರಣೆ ಆಗಸ್ಟ 15

11. ಶಿಕ್ಷಕರ ದಿನಾಚರಣೆ ಸೆಪ್ಟೆಂಬರ್ 5

12. ಗಾಂಧಿ ಜಯಂತಿ ಅಕ್ಟೋಬರ್ 2

IV. 13, 14, 15, 16 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

V. 17. ಜನನಿ , ಮಾತೃ , ಮಾತೆ, ತಾಯಿ
18. ಕುರುಹು, ಗುರುತು
19. ಮರಣ, ಸಾವು
20. ಕೆಲಸ, ವೃತ್ತಿ

VI. 21. ನಮ್ಮ ದೇಶ ಭಾರತ

22. ಭಾರತೀಯರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದರು.

23. ಗಾಂಧೀಜಿಯವರ ತತ್ವ ಅಹಿಂಸೆ

24. ಜನರು ದುರ್ಗದ ಬಯಲಿನಲ್ಲಿ ಸೇರಿದರು.

25 ನಾರಾಯಣ ಪೂರ್ಣ ಹೆಸರು ನಾರಾಯಣ್ ಮಹಾದೇವ್ ದೋನಿ.

26. ಸಾಮರಸ್ಯದ ಮಂತ್ರ ವಂದೇ ಮಾತರಂ

27. ನಾರಾಯಣನು ಹುಬ್ಬಳ್ಳಿಯ ಲ್ಯಾಮಿಂಟನ್ ಪ್ರೌಢಶಾಲೆಯಲ್ಲಿ ಓದುತ್ತಿದ್ದನು.

VII. 28."ಮಗು ನೀನು ಇನ್ನೂ ಕಿರಿಯವ. ದೊಡ್ಡವರ ಮೆರವಣಿಗೆಯಲ್ಲಿ ನೀನು ಹೇಗೆ ಸೇರಲು ಸಾಧ್ಯ"? ಎನ್ನುವುದು ಬಾಲಕ ನಾರಾಯಣನ ಕುರಿತಾಗಿ ತಾಯಿಯ ದುಗುಡವಾಗಿತ್ತು.

29 ದುರ್ಗದ ಬಯಲಿನಲ್ಲಿ ಸೇರಿದ್ದ ಜನರು 'ಭಾರತ್ ಮಾತಾಕೀ ಜೈ', 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ', 'ಚಲೇಜಾವ್' ಎಂಬ ಘೋಷಣೆಗಳನ್ನು ಕೂಗುತ್ತಿದ್ದರು.

VIII. 30, 31, 32 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

IX. 33. ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

X. 34. ಯೋಧ, ದೇಶ, ತ್ಯಾಗ, ಹುತಾತ್ಮ, ಹೋರಾಟ, ಪ್ರಾಣ, ಸ್ವಾತಂತ್ರ್ಯ

ಘಟಕ15: ದುಡಿಮೆಯ ಗರಿಮೆ

I. 1. ಸಿ)ಶಿಕ್ಷಕಿ

2. ಸಿ)ದುಃಖ

3.ಬಿ) ಮುದದ+ಇಂದ

4. ಡಿ)ಸಹಾಯ

5. ಬಿ) ರೈತ

II. 6. ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

III. 7. ದರ್ಜಿಯು ಬಳಸುವ ಪರಿಕರಗಳು

ಟೈಲರಿಂಗ್ ಮಷೀನ್ ,ಟೇಪು, ಕತ್ತರಿ, ದಾರ ,ಮಿಷನ್ ,ಸೂಜಿ ,ಬಟ್ಟೆ ಇತ್ಯಾದಿ.

IV. 8. ಕಬ್ಬಿಣ ಕುಟ್ಟುತ ಹಾರೆಯ ಮಾಡುತ

ಮುದದಿಂದ ಕೊಡುವೆನು ರೈತನಿಗೆ

ಬೆಳೆಯನು ಬೆಳೆಯಲು ನೆರವನು ನೀಡುವೆ

ಜನರನು ಸಲಹುವ ದಾತನಿಗೆ

ಕಾಡನು ಸೇರುತ ಒಣಮರ ಹುಡುಕುತ

ನೇಗಿಲ ಅಳತೆಗೆ ಕೊಯ್ಯುವೆನು

ಉತ್ತಮ ಹಲವನು ಮಾಡುತ ನೊಗವನು

. ಕೆತ್ತನೆಯೊಂದಿಗೆ ನೀಡುವೆನು

V. 9. ಕಬ್ಬಿಣ ಕುಟ್ಟಿ ಹಾಂರೆಯನ್ನು ಮಾಡುವನು.

10. ಕಮ್ಮಾರನು ಹಾರೆಯನ್ನು ಮುದದಿಂದ ರೈತನಿಗೆ ಕೊಡುವನು.

11. ನೊಗವನ್ನು ಬಡಗಿಯು ಮಾಡುವನು.

12. ಬಡಗಿಯು ಕಾಡನು ಸೇರಿ ಒಣಮರವನ್ನು ಹುಡುಕಿದನು .

13. ಭೂಮಿಯನ್ನು ಉಳುವ ಸಾಧನವನ್ನು ನೇಗಿಲು ಎನ್ನುವರು.

14 ಗಂಟನ್ನು ಕತ್ತೆಯ ಬೆನ್ನ ಮೇಲೆ ಇರಿಸುವನು.

15. ಎಲ್ಲರ ವಸನವನ್ನು ಒಗೆಯುವರನ್ನು ಅಗಸ ಎನ್ನುವರು.

16. ಬೆಸ್ತನು ಮೀನನ್ನು ಸಂತೆಗೆ ಸಾಗಿಸಿ ಮಾರುವನು.

17. ಮೀನನು ಮಾರಿ6 ಹಣವನ್ನು ಎಣಿಸುವನು.

18. ಉಡುಗೆಯನ್ನು ದರ್ಜಿಯು ಹೊಲಿಯುವನು.

VI. **19.** ಕಬ್ಬಿಣವನ್ನು ಕುಟ್ಟಿ ಕಮ್ಮಾರನು ಹಾರೆಯ ಮಾಡಿ ರೈತನಿಗೆ ಕೊಡುವನು. ಬೆಳೆಯನು ಬೆಳೆಯಲು ನೆರವು ನೀಡಿ ಜನರನ್ನು ಸಲಹಲು ಸಹಾಯ ಮಾಡುವನು.

20.ಅಗಸನು ಬಟ್ಟೆಯ ಗಂಟನ್ನು ಒಟ್ಟಿಗೆ ಸೇರಿಸಿ ಕತ್ತೆಯ ಬೆನ್ನ ಮೇಲೆ ಇರಿಸಿ ನೀರನ್ನು ಕಲುಷಿತಗೊಳಿಸಿದಂತೆ ಶುಚಿಗೊಳಿಸುವನು.

21. ಬೆಸ್ತನು ಮೀನನ್ನು ಹಿಡಿದ ನಂತರ ಸಂತೆಗೆ ಸಾಗಿಸಿ ಮಾರುವನು. ಮಾರಿದ ನಂತರ ಹಣವನ್ನು ಎಣಿಸುವನು.

22. ಬಟ್ಟೆ ಹೊಲಿಯುವವರು ಹೊಸ ಹೊಸ ಬಗೆಯಲ್ಲಿ ಉಡುಗೆಯನ್ನು ಹೊಲಿದು ಅಪ್ಪ ಅಮ್ಮ ಮತ್ತು ಮಕ್ಕಳ ಬಳಗದ ಮೆಚ್ಚುಗೆ ಗಳಿಸಿ ಮೈಮನವನ್ನು ಬೆಳಗುವನು.

VII. 23, 24, 25, 26 **ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.**

VIII. 27. **ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.**

IX. 28. ಶಾಲೆ ,ಪುಸ್ತಕ ,ಮಕ್ಕಳು ,ಕಪ್ಪು ಹಲಗೆ ,ಸೀಮೆ ಸುಣ್ಣ ,ಕುರ್ಚಿ, ಶಿಕ್ಷಕ ,ಡಸ್ಟರ

ಘಟಕ16: ಕನಸುಗಾರ ಕಲಾಂ

I. 1.ಡಿ)ಮೂಳೆ ತಜ್ಞರು

2.ಎ)ಕೈ ಕಾಲುಗಳಿಗೆ ಜೋಡಿಸುವ ಕೃತಕ ಸಾಧನ

3. ಸಿ)ಅಗ್ನಿಯ ರೆಕ್ಕೆಗಳು

4. ಸಿ) ಅಬ್ದುಲ್ ಕಲಾಂ

II. 5. ಎ). ಕುಂಬಾರ
ಬಿ)ಮೇದರ
ಸಿ) ಚಮ್ಮಾರ
ಡಿ) ಬಡಗಿ

III. 6.ಮರಣ

7.ಅಮಾನವೀಯತೆ

8.ಸಾಧ್ಯ

IV. 9. ವೈದ್ಯೆ

10.ಅಮ್ಮ

11.ಹುಡುಗಿ

12.ಕನಸುಗಾರ್ತಿ

V. 13. ವಿಜ್ಞಾನಿಗಳ ಪ್ರಯೋಗಾಲಯಕ್ಕೆ

14. ಕ್ಷಿಪಣಿಗಳನ್ನು ಹಗುರವಾದ ವಸ್ತುಗಳಿಂದ ತಯಾರಿಸುತ್ತಾರೆ.

15.ಹೈದ್ರಾಬಾದ್ ನಲ್ಲಿದೆ

16. ಕಾಲಿನ ನ್ಯೂನತೆಗೇ

17. 3 ಕಿಲೋ ಗ್ರಾಂ

18.ಲೋಹದ ಕ್ಯಾಲಿಪರ್

19. ತಮಿಳುನಾಡಿನ ರಾಮೇಶ್ವರಂ ಎಂಬ ಹಳ್ಳಿಯಲ್ಲಿ ಜನಿಸಿದರು.

20. ತಂದೆಜೈನುಲಾಬೀದ್ದನ್ ಮರಾಕಯಾರ್ ತಾಯಿ ಆಶಿಯಮ್ಮ

21. ರಾಷ್ಟ್ರಪತಿ ಹುದ್ದೆ

22. ದ್ರೌಪತಿ ಮುರ್ಮು

VI. 23. ಮೂರು ಕಿಲೋ ಗ್ರಾಂ ತೂಕದ ಕ್ಯಾಲಿಪರ್ ಅನ್ನು ಅಳವಡಿಸಿಕೊಂಡು ಭಾರವಾದ ಕಾಲನ್ನು ಎತ್ತಿ ಇಟ್ಟು ನಡೆಯಲು ಅವರು ಬಲು ಕಷ್ಟ ಪಡುತ್ತಿದ್ದರು

24. 3 ಕೆಜಿ ತೂಕದ ಕ್ಯಾಲಿಪರ್ ಅಳವಡಿಸಿಕೊಂಡು ಭಾರವಾದ ಕಾಲನ್ನು ಎತ್ತಿ ಇಟ್ಟಿ ನಡೆಯಲು ಮಕ್ಕಳು ಕಷ್ಟಪಡುತ್ತಿದ್ದ ಸಮಸ್ಯೆಯನ್ನು ಹೇಳಿಕೊಂಡರು

25. ಸತತ ಮೂರು ವಾರಗಳ ಕಾಲ ಶ್ರಮಿಸಿ ಕೇವಲ 300 ಗ್ರಾಮ ತೂಕದ ಕ್ಯಾಲಿಪರ್ ತಯಾರಿಸಿದರು

26. ಮುಂದೊಂದು ದಿನ ನಾನು ಆಕಾಶದಲ್ಲಿ ಹಕ್ಕಿಯಂತೆ ಹಾರಾಡುತ್ತೇನೆಂದು ಕನಸು ಕಂಡರು

27. ರಾಕೆಟ್ ಹಾಗೂ ಕ್ಷಿಪಣಿಯ ಉಡಾವಣೆಯಲ್ಲಿ ಮಹತ್ವದ ಸಾಧನೆ ಮಾಡಿದರು

28. ಪದ್ಮಭೂಷಣ ಪದ್ಮವಿಭೂಷಣ ಭಾರತ ರತ್ನ

VII. 29. ಕಣ್ಣು ಕಾಣದವರಿಗೆ ಕೈಹಿಡಿದು ನಡೆಸುವೆ. ವಿಶೇಷ ಚೇತನ ರೊಂದಿಗೆ ಆಟವಾಡುವೆ. ಮಾತು ಕಿವಿ ಕೇಳದ ವಿಶೇಷ ಚೇತನರೊಂದಿಗೆ ಕೈ ಭಾಷೆಯಿಂದ ಮಾತನಾಡುವೆ

30, 31 ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

32.

A. ಯಕ್ಷಗಾನ

B. ಭರತನಾಟ್ಯ

C. ಡೊಳ್ಳು ಕುಣಿತ

D. ದಾಂಡಿಯ

33. ಮಕ್ಕಳ ಉತ್ತರವನ್ನು ಆಧರಿಸಿ ಅಂಕ ನೀಡುವುದು.

ಘಟಕ 17: ಕಾಡಿನಲ್ಲೊಂದು ಸ್ಪರ್ಧೆ

I.

1) ಕಾಡಿನ ರಾಜ ಸಿಂಹ.
2)ಸ್ಥಳದಲ್ಲಿಯೇ ಸೂಚಿಸಿದ ವಿಷಯದ ಬಗ್ಗೆ ಭಾಷಣ ಮಾಡುವುದು.
3)ರೇಡಿಯೋ.
4)ವಿಮಾನ.
5)ಮಾರ್ಕೋನಿ

II.

6. ಕಾಡಿನ ದಿನಾಚರಣೆಯನ್ನು ಆಚರಿಸೋಣ.
7. ಪ್ರಾಣಿಗಳೆಲ್ಲ ನಿರ್ಭಯವಾಗಿ ಓಡಾಡುತ್ತಿದ್ದವು.
8. ಬ್ಯಾಂಕಿನಲ್ಲಿ ಎಲ್ಲರೂ ಹಣದ ವ್ಯವಹಾರ ಮಾಡುತ್ತೇವೆ.
9. ಹಿಮಾಲಯ ಅತ್ಯಂತ ಎತ್ತರವಾದ ಪರ್ವತ.

III.

10. ನರಿಯು ಕಾಡಿನ ಎಲ್ಲಾ ಪ್ರಾಣಿಗಳಿಗೆ ಹೇಳಿದ ಮಾತು.
11. ಕೋತಿಯು ಕರಡಿಗೆ ಹೇಳಿದ ಮಾತು.
12. ನರಿಯು ಕಾಡಿನ ಎಲ್ಲಾ ಪ್ರಾಣಿಗಳಿಗೆ ಹೇಳಿದ ಮಾತು.

IV.

13.ಕಾಡಿನ ದಿನಾಚರಣೆಯನ್ನು ಆಚರಿಸೋಣ.

14. ಆಶುಭಾಷಣ ಸ್ಪರ್ಧೆ ಎಂದರೇನು?

15.ಅಬ್ಬಾ! ನನಗೆ ಇಷ್ಟವಾದ ವಿಷಯ ಬಂದಿದೆ.

16. ರೇಡಿಯೋದಲ್ಲಿ ಚಿಂತನ, ಕೃಷಿ ಸಮಾಚಾರ, ಪ್ರಸಾರವಾಗುತ್ತದೆ.

17. ಓ! ನರಿರಾಯ ನಿನಗೆ ಅಷ್ಟು ಗೊತ್ತಿಲ್ವಾ?

V. 18. ನದಿಯಲ್ಲಿ

19. ಮನೆಯಲ್ಲಿ

20. ಶಆಲೆಯಲ್ಲಿ

21. ಕೆರೆಯಲ್ಲಿ

VI. 22, 23, 24 ಮಕ್ಕಳ ಉತ್ತರ ಗಮನಿಸಿ ಅಂಕ ನೀಡುವುದು.

VII. 25. ಚಂದ್ರ

26.ಕೊಕ್ಕರೆ

27. ಹಣೆಬಟ್ಟು/ ಕುಂಕುಮ

VIII. 28, 29, 30, 31 ಮಕ್ಕಳ ಉತ್ತರ ಗಮನಿಸಿ ಅಂಕ ನೀಡುವುದು.

IX.32, 33, 34 ಮಕ್ಕಳ ಉತ್ತರ ಗಮನಿಸಿ ಅಂಕ ನೀಡುವುದು.

X.35 ಮಕ್ಕಳ ಉತ್ತರ ಗಮನಿಸಿ ಅಂಕ ನೀಡುವುದು.